ಮಂಗಳೂರು ವಿಶ್ವವಿದ್ಯಾನಿಲಯ

ಭಗವತಿ ಆರಾಧನೆ – ಸಾಂಸ್ಕೃತಿಕ ಅಧ್ಯಯನ

ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ
ಸಂಶೋಧನಾ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ಅರುಣ್

ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

ಮಾರ್ಗದರ್ಶನ

ಡಾ. ನಾಗಪ್ಪ ಗೌಡ. ಆರ್

ಸಹ ಪ್ರಾಧ್ಯಾಪಕರು
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–೫೭೪೧೧೯

೨೦೨೦

ಪರಿವಿಡಿ

ಪ್ರಸ್ತಾವನೆ

ಅಧ್ಯಯನದ ವ್ಯಾಪ್ತಿ ಮತ್ತು ಉದ್ದೇಶ

ಅಧ್ಯಯನದ ವಿಧಾನ

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಒಂದು

ಭಗವತಿ ಆರಾಧನೆಯ ಸ್ವರೂಪ ವಿವೇಚನೆ

೧.೧. ಶಕ್ತಿಯಾರಾಧನೆಯ ಹಿನ್ನೆಲೆ
ಮಾತೃದೇವತಾರಾಧನೆಯ ಪರಿಕಲ್ಪನೆ ಮತ್ತು ಪ್ರಾಚೀನತೆ

೧.೩. ಭಗವತಿ ಆರಾಧನೆಯ ಸ್ವರೂಪ

೧.೪. ಭಗವತಿ : ಪದನಿಷ್ಪತ್ತಿ ಮತ್ತು ಅರ್ಥ ಸ್ವರೂಪ

೧.೫. ಪೌರಾಣಿಕ ಪರಿಕಲ್ಪನೆ

೧.೬. ಚಾರಿತ್ರಿಕತೆ

೧.೭. ಬೌದ್ಧ–ಜೈನರಲ್ಲಿ ಭಗವತಿ ಪರಿಕಲ್ಪನೆ

೧.೮. ಭಗವತಿಯರ ಸಂಖ್ಯೆ

೧.೯. ಭಗವತಿಯರ ವರ್ಗೀಕರಣ

೧.೧೦. ಆರಾಧನೆಯ ಮೇಲಿನ ವರ್ಗೀಕರಣ

೧.೧೧. ಭಗವತಿ ಆರಾಧನಾಲಯಗಳು

ಅಧ್ಯಾಯ ಎರಡು

ಭಗವತಿ ಆರಾಧನೆಯ ಸಾಂಸ್ಕೃತಿಕ ಸ್ವರೂಪ

೨.೧. ಭಗವತಿ ಆರಾಧನೆಯ ವ್ಯಾಪ್ತಿ ಮತ್ತು ಪ್ರಸರಣ

೨.೨. ಭಗವತಿ ಆರಾಧನೆಯ ಪ್ರಭೇದಗಳು

೨.೩. ಸಾಂಸ್ಕೃತಿಕ ವಿಧಿವಿಧಾನಗಳ ವಿವರಣಾತ್ಮಕ ಅಧ್ಯಯನ
೨.೩.೧. ಪಾತ್ರಿ ಪ್ರಧಾನ ವಿಧಿವಿಧಾನಗಳು
೨.೩.೨. ತೆಯ್ಯಂ ಪ್ರಧಾನ ವಿಧಿವಿಧಾನಗಳು

ಅಧ್ಯಾಯ ಮೂರು
ಭಗವತಿ ಆರಾಧನೆಯಲ್ಲಿ ಕಲಾತ್ಮಕತೆ

೩.೧. ಭಗವತಿ ಆರಾಧನೆ : ಧಾರ್ಮಿಕ ಜನಪದ ರಂಗಭೂಮಿ

೩.೨ ಬಣ್ಣಗಾರಿಕೆ

೩.೩. ವೇಷ ಭೂಷಣಗಳು

೩.೪. ತಿರುಮುಡಿಗಳು

೩.೫. ಆಯುಧಗಳು

೩.೬. ವಾದ್ಯಪರಿಕರಗಳು

೩.೭. ಕಳಂ

೩.೮. ಕುಣಿತ

೩.೯. ಸಾಂಕೇತಿಕತೆ

ಅಧ್ಯಾಯ ನಾಲ್ಕು
ಭಗವತಿ ಆರಾಧನೆಯ ಮೌಖಿಕ ಪಠ್ಯಗಳು

೪.೧. ಆರಾಧನೆ ಮತ್ತು ಮೌಖಿಕ ಪಠ್ಯಗಳ ಸಾಂಸ್ಕೃತಿಕ ಸಂಬಂಧ

೪.೨. ಮೌಖಿಕ ಪಠ್ಯಗಳ ಕತೆಯು ಆರಾಧನೆಯಲ್ಲಿ ಅಭಿವ್ಯಕ್ತಗೊಳ್ಳುವ ಬಗೆ

೪.೩. ಮೌಖಿಕ ಪಠ್ಯಗಳು: ಹಾಡು ಮತ್ತು ನುಡಿಗಟ್ಟುಗಳ 'ಶಬ್ದಶಕ್ತಿ'

೪.೪. ಭಗವತಿ ಕಥನ: ಪ್ರಾತಿನಿಧಿಕ ಪಠ್ಯವೊಂದರ ವಿಶ್ಲೇಷಣೆ

ಅಧ್ಯಾಯ ಐದು
ಭಗವತಿ ಆರಾಧನೆ: ಆಚರಣೆ ಮತ್ತು ಸಮಾಜ

೫.೧. ಚಿಕಿತ್ಸಾತ್ಮಕ ಪದ್ಧತಿ

೫.೨. ನ್ಯಾಯ ಪ್ರಮಾಣ ಪದ್ಧತಿ

೫.೩. ಮನೋರಂಜನೆ

೫.೪. ಫಲವಂತಿಕೆಯ ಆಚರಣೆಗಳು

೫.೫. ಕೌಟುಂಬಿಕ ಕಾರ್ಯಗಳು

೫.೬. ಆಚಾರ ಪಟ್ಟವರು

೫.೭. ಶುದ್ಧಿಯ ಪರಿಕಲ್ಪನೆ

೫.೮. ಸಾಂಸ್ಕೃತಿಕ ಅನನ್ಯತೆಯ ಪ್ರಶ್ನೆ

ಅಧ್ಯಾಯ ಆರು

ಭಗವತಿ ಆರಾಧನೆಯ ಇಂದಿನ ಸ್ವರೂಪ ಮತ್ತು ಮಾರ್ಪಾಡುಗಳು

೬.೧. ಭಗವತಿ ಆರಾಧನೆಯ ಸಾಂಸ್ಕೃತಿಕ ಸ್ವರೂಪದಲ್ಲಿ ಆಗಿರುವ ಬದಲಾವಣೆಗಳು, ಕಾರಣಗಳು ಮತ್ತು ಪರಿಣಾಮಗಳು

೬.೨. ಭಗವತಿ ಆರಾಧನೆಯ ಪ್ರಸ್ತುತತೆ

ಸಮಾರೋಪ

ಭಗವತಿ ಆರಾಧನೆ – ಸಾಂಸ್ಕೃತಿಕ ಅಧ್ಯಯನ

ಪ್ರಸ್ತಾವನೆ

ಆರಾಧನೆ ಎಂಬುದು ಜನಸಂಸ್ಕೃತಿಯ ಒಂದು ಕ್ರಿಯಾಶೀಲ ಭಾಗ. ಪ್ರಾಚೀನ ನಾಗರಿಕತೆಗಳ ಕಾಲಾವಧಿಯಲ್ಲಿ ಉದಯಗೊಂಡು ಜನಜೀವನದ ಶೈಲಿಯು ನವಯುಗದತ್ತ ಸರಿಯುವ ತನಕವೂ ಈ ಆರಾಧನಾ ಪ್ರಕ್ರಿಯೆಯು ಮುಂದುವರಿಯುತ್ತಾ ಬಂದಿದೆ. ಆಧುನಿಕ ಪ್ರಗತಿಯ ಸ್ಥೂಲವೂ ಸೂಕ್ಷ್ಮವೂ ಆಗಿರುವ ಪ್ರಭಾವಗಳು ಆರಾಧನಾ ಪ್ರವೃತ್ತಿಯನ್ನು ಪಲ್ಲಟಗೊಳಿಸಿದರೂ ಅದು ಗತದೊಂದಿಗಿನ ಬೆಸುಗೆಯನ್ನು ಇಂದಿಗೂ ಕಳಚಿಕೊಂಡಿಲ್ಲ. ಸಾಮಾಜಿಕ ಬದುಕಿಗೆ ಹಾಸುಹೊಕ್ಕಾಗಿ ಇದು ಬೆಳೆದಿರುವ ಕಾರಣ ಮನುಷ್ಯ ಕೇಂದ್ರಿತವಾದ ಸರ್ವ ಚಟುವಟಿಕೆಗಳಿಗೂ ಆರಾಧನೆಯ ಪ್ರಭಾವವಿರುವುದನ್ನು ಕಾಣಬಹುದು. ಆದ್ದರಿಂದಲೇ ಆರಾಧನೆಯು ಸಮಾಜದ ಸಾಂಸ್ಕೃತಿಕ ಚರಿತ್ರೆಗೆ ಕಾರಣವಾಗುತ್ತದೆ. ಈ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಿ ಆ ಮುಖೇನ ಆರಾಧನೆಯ ನೆಲೆಯನ್ನು ಮರುಪರಿಶೀಲಿಸುವುದು ಹೊಸ ಚಿಂತನಾ ಕ್ರಮವಾಗಿದೆ.

ಆರಾಧನೆ ಎಂಬುದು ಜನಸಂಸ್ಕೃತಿಯ ಕಲಾತ್ಮಕ ಅಭಿವ್ಯಕ್ತಿ. ಸಾಮಾಜಿಕ ಜೀವನದ ಅಂತರ್‌ಸತ್ವ ಈ ಆರಾಧನೆಯ ವಿಧಿವಿಧಾನಗಳಲ್ಲಿ ಆಕರ್ಷಕವಾಗಿ ಪ್ರದರ್ಶಿಸಲ್ಪಡುತ್ತದೆ. ಹಾಗಾಗಿ ಆರಾಧನೆಯೊಂದನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡಿದರೆ, ಆ ಆರಾಧನೆಯು ಒಳಗೊಳ್ಳುವ ಪ್ರದೇಶ, ಸಮುದಾಯ, ಜನಜೀವನಗಳ ವೈವಿಧ್ಯಪೂರ್ಣ ಒಳನೋಟಗಳು ಗೋಚರವಾಗುತ್ತವೆ. ಈ ಉದ್ದೇಶವನ್ನಿಟ್ಟುಕೊಂಡೇ ಭಗವತಿ ಆರಾಧನೆಯ ಸಾಂಸ್ಕೃತಿಕ ಅಧ್ಯಯನ ಹೆಚ್ಚು ಪ್ರಸ್ತುತವಾಗುತ್ತದೆ.

ಒಂದು ಸುವಿಸ್ತಾರ ಅಧ್ಯಯನದ ಮೂಲಕ ಭಗವತಿ ಆರಾಧನೆಯನ್ನು ಆಧಾರವಾಗಿಟ್ಟುಕೊಂಡು ಪ್ರಕಾರಕೇಂದ್ರಿತ ಮತ್ತು ಪ್ರದೇಶಕೇಂದ್ರಿತ ಸಾಂಸ್ಕೃತಿಕ ಇತಿಹಾಸವನ್ನು ಸಂರಚಿಸಲು ಸಾಧ್ಯ. ಹೊಸ ಆಯಾಮಗಳಿರುವ ಸ್ಥಳೀಯ ಚರಿತ್ರೆ ಮತ್ತು ಜನಸಾಮಾನ್ಯರ ಸಂಸ್ಕೃತಿಯನ್ನು ಇದು ರೂಪುಗೊಳಿಸುತ್ತದೆ. ಕರಾವಳಿ ಜನರ ಆರಾಧನಾ ನಿಷ್ಠವಾದ ಲೋಕದೃಷ್ಟಿಯ ಸ್ವರೂಪವನ್ನು ಗುರುತಿಸುತ್ತದೆ. ತುಳುನಾಡಿನ ಭೂತಾರಾಧನೆಯಂತೆಯೇ ಭಗವತಿ ಆರಾಧನೆಯ ವಲಯದಲ್ಲೂ ಜಾನಪದ ರಂಗಭೂಮಿಯ ನೆಲೆಗಳನ್ನು ಕಂಡುಕೊಳ್ಳಬಹುದು. ತುಳುವ ನಾಡು ಮತ್ತು ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಕೇರಳದ ಮೂಲ ಸಂಸ್ಕೃತಿಯಾದ ಭಗವತಿ ಆರಾಧನೆಯು ಮರುರೂಪು ಪಡೆಯುವಾಗ ಮೂಡುವ ಹೊಸ ಸಾಧ್ಯತೆಯೊಂದರ ಕಡೆಗೆ ಈ ಸಾಂಸ್ಕೃತಿಕ ಅಧ್ಯಯನವು ಲಕ್ಷ್ಯಹರಿಸಿದೆ.

ಅಧ್ಯಯನದ ವ್ಯಾಪ್ತಿ ಮತ್ತು ಉದ್ದೇಶ

ಶಕ್ತಿದೇವತಾರಾಧನೆಯು ಭಾರತದಾದ್ಯಂತ ಬೇರೆ ಬೇರೆ ರೀತಿಯಲ್ಲಿ ನಡೆಯುತ್ತದೆ. ಕೇರಳದಲ್ಲಿ ಈ ಶಕ್ತಿದೇವತೆಯನ್ನು ಭಗವತಿ ಎಂಬ ಸ್ವರೂಪದಲ್ಲಿ ಆರಾಧಿಸಲಾಗುತ್ತದೆ. ಭಗವತಿ ಆರಾಧನೆ ಸಮಗ್ರ ಕೇರಳದ ವ್ಯಾಪ್ತಿಯಲ್ಲಿ ನಡೆಯುವುದಾದರೂ, ಈ ಅಧ್ಯಯನದಲ್ಲಿ ಕೇರಳದ ಗಡಿ ಪ್ರದೇಶವಾದ ಕಾಸರಗೋಡು ಜಿಲ್ಲೆಯ ಉತ್ತರ ಭಾಗ ಮತ್ತು ಕರ್ನಾಟಕದ ಗಡಿಭಾಗವಾದ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ದಕ್ಷಿಣಭಾಗ ಎಂಬೆರಡೂ

ಸೀಮಿತ ವ್ಯಾಪ್ತಿಯಲ್ಲಿ ನಡೆಯುವ ಭಗವತಿ ಆರಾಧನೆಯ ಕುರಿತು ಮಾತ್ರ ವಿಶ್ಲೇಷಿಸಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಉತ್ತರ ಕಾಸರಗೋಡು ಜಿಲ್ಲೆಯ ವ್ಯಾಪ್ತಿಯನ್ನು 'ಉತ್ತರ ಕೇರಳ'ವೆಂದೂ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯನ್ನು 'ದಕ್ಷಿಣ ತುಳುನಾಡು' ಎಂದೂ ಈ ಪ್ರಬಂಧದುದ್ದಕ್ಕೂ ಗುರುತಿಸಲಾಗಿದೆ. ಈ ಭಾಗಗಳಲ್ಲಿ ಸಮುದಾಯ ಬದ್ಧವಾಗಿ ಆರಾಧನೆ ಹೆಚ್ಚಾಗಿ ಕಂಡುಬರುವುದರಿಂದ ವಿವಿಧ ಭಗವತಿ ಆರಾಧಕ ವರ್ಗಗಳ ಪೈಕಿ ತೀಯ, ಮೋಯ, ಮಣಿಯಾಣಿ, ಶಾಲೀಯ ಮತ್ತು ವಾಣೀಯರ ಕೆಲವು ಆರಾಧನಾ ಸ್ವರೂಪಗಳನ್ನು ಅಧ್ಯಯನದ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹೀಗಿದ್ದರೂ ಸಮುದಾಯ ನಿಷ್ಠವಾದ ಸಮಗ್ರ ಮಾಹಿತಿಗಳನ್ನು ಇದರಲ್ಲಿ ನಿರೀಕ್ಷಿಸುವಂತಿಲ್ಲ. ಏಕೆಂದರೆ ಇದು ಆರಾಧನಾ ಕೇಂದ್ರಿತ ಅಧ್ಯಯನವೇ ಹೊರತು ಸಮುದಾಯ ಬದ್ಧವಾದದ್ದಲ್ಲ.

ಸಾಮಾಜಿಕ ಉತ್ಪನ್ನವಾಗಿ ಭಗವತಿ ಆರಾಧನೆ ಪ್ರಸ್ತುತಗೊಳ್ಳುವುದನ್ನೂ ವಿಶ್ಲೇಷಿಸಲಾಗಿದ್ದು ವಿವಿಧ ಆಚರಣಾತ್ಮಕ ವಿಧಿವಿಧಾನಗಳ ಆಧಾರದಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಇಂದಿನ ಸಾಂಸ್ಕೃತಿಕ ಜನಜೀವನದಲ್ಲಿ ಭಗವತಿ ಆರಾಧನೆಯ ಪ್ರಸ್ತುತತೆಯನ್ನು ವಿವೇಚಿಸುವಾಗ ಗತ ಮತ್ತು ಆಧುನಿಕ ಸಂದರ್ಭಗಳನ್ನು ಮುಖಾಮುಖಿಗೊಳಿಸಲಾಗಿದೆ. ಉತ್ತರ ಕಾಸರಗೋಡು ಜಿಲ್ಲೆ ಮತ್ತು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಡೆಯುವ ಆರಾಧನಾ ಪ್ರಕ್ರಿಯೆಗಳ ಕುರಿತಾಗಿ ಪ್ರಮುಖ ಗಮನ ಹರಿಸಿರುವುದಾದರೂ ಮಧ್ಯ ಮತ್ತು ದಕ್ಷಿಣ ಕೇರಳದ ಭಗವತಿ ಆರಾಧನಾ ವಿಚಾರಗಳನ್ನೂ ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ. ಭಗವತಿ ಆರಾಧನೆಯು ಕೇರಳ – ಕರ್ನಾಟಕಗಳಲ್ಲಿ ಕಾಣಸಿಗುವ ಬರಿಯ ಒಂದು ಸರಳ ಪೂಜಾಪ್ರಕಾರ ಮಾತ್ರವಲ್ಲ. ಅದು ಪುರಾಣ, ಸಮಾಜ, ಸಂಸ್ಕೃತಿ, ಕಲೆ, ರಾಜಕೀಯ, ಚರಿತ್ರೆ, ಮನೋವೈಜ್ಞಾನಿಕತೆಗಳ ವಿಷಯಾಧಿಕ್ಯತೆಯುಳ್ಳ ಮಹತ್ವದ ಆರಾಧನಾ ಪ್ರಸ್ಥಾನ. ಮಾನವ ಜೀವನದ ಪ್ರಾಚೀನತೆ ಮತ್ತು ಬೆಳವಣಿಗೆಯೊಂದಿಗೆಯೂ ಇದು ಅವಿನಾಭಾವತೆಯನ್ನು ಹೊಂದಿರುವುದರಿಂದ ಈ ಅಧ್ಯಯನದಲ್ಲಿ ಸಮಗ್ರತೆಯನ್ನು ಸಾಧಿಸುವುದು ಕಷ್ಟಾಸಾಧ್ಯವಷ್ಟೆ. ಆದ್ದರಿಂದಲೇ ಅಧ್ಯಯನದ ಅನುಕೂಲತೆಗಾಗಿ ವಿಷಯದ ಸಮಗ್ರತೆಗೆ ಪೂರಕವಾಗಬಲ್ಲ ಮುಖ್ಯ ಅಂಶಗಳನ್ನಷ್ಟೆ ವಿಶ್ಲೇಷಿಸಿ ಅಧ್ಯಯನ ನಡೆಸಲಾಗಿದೆ. ಮಿಕ್ಕುಳಿದಿರುವುದು ಇನ್ನೂ ಸಾಕಷ್ಟಿವೆ.

ಈ ಅಧ್ಯಯನದ ಮುಖ್ಯ ಉದ್ದೇಶ ಆರಾಧನೆಯೊಂದು ಜನಸಂಸ್ಕೃತಿಯನ್ನು ರೂಪುಗೊಳಿಸುವ ಸಾಧ್ಯತೆಗಳನ್ನು ಸಂಶೋಧಿಸುವುದು. ಆರಾಧನಾ ಸಂಪ್ರದಾಯವೊಂದರ ಸಾಂಸ್ಕೃತಿಕ ನೆಲೆಯನ್ನು ಅಧ್ಯಯನ ನಡೆಸಿದಾಗ, ಅದು ಸಮಾಜದ ಜೊತೆಗೆ ಇರಿಸಿಕೊಂಡ ಸಂಬಂಧದ ಅರಿವಾಗುತ್ತದೆ. ಹೀಗೆ ಆರಾಧನಾ ಕೇಂದ್ರಿತವಾದ ಸಾಂಸ್ಕೃತಿಕ ಚರಿತ್ರೆಯನ್ನು ಮರುರಚನೆಗೊಳಿಸುವುದು ಈ ಅಧ್ಯಯನದ ಇನ್ನೊಂದು ಉದ್ದೇಶ. ಭಗವತಿ ಆರಾಧನೆಯ ಕೃಷಿ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದು ಬಂದ ಫಲವಂತಿಕೆಯ ಆರಾಧನೆಯಾಗಿದೆ. ಇದರಲ್ಲಿ ವೀರಾರಾಧನೆ, ಮೃಗಾರಾಧನೆ, ರೋಗಾಭಿಮಾನಿ ದೇವತೆಗಳ ಆರಾಧನೆ ಇತ್ಯಾದಿ ಸೇರಿಕೊಂಡಿರುವುದರಿಂದ ಭಗವತಿ ಆರಾಧನೆಯ ಸಂಕೀರ್ಣತೆಗೆ ಕಾರಣವಾದ ಸಾಂಸ್ಕೃತಿಕ ಎಳೆಗಳನ್ನು ವಿಶದೀಕರಿಸುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದು. ಇದು ಸಾಂಸ್ಕೃತಿಕ ಅಧ್ಯಯನವಾಗಿರುವ ಕಾರಣ ವಿಚಾರಗಳು ಸಂಸ್ಕೃತಿ, ಸಮುದಾಯ ಅಥವಾ ಸಾಮಾಜಿಕ ವ್ಯವಸ್ಥೆಯ ಪೋಷಕ ಮೌಲ್ಯಗಳೆಂಬುದಕ್ಕೆ ಸಾಕ್ಷ್ಯಾಂಶಗಳನ್ನು ನೀಡುವುದು ಈ ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ. ಇದು ಸಮಾಜದ ಸಾಂಸ್ಕೃತಿಕ ವಿಶ್ಲೇಷಣೆಯ ಕೇವಲ ಒಂದು ನವಸಾಧ್ಯತೆಯಷ್ಟೆ. ಈ ಕಾರಣದಿಂದ ಅಧ್ಯಯನವು ಇದೇ ವಿಷಯದ ಕುರಿತಾಗಿ ಇನ್ನಷ್ಟು ಸಂಶೋಧನಾ ಸಾಧ್ಯತೆಗಳಿವೆ ಎಂಬುದನ್ನೇ ತಿಳಿಸುತ್ತದೆ.

ಅಧ್ಯಯನದ ವಿಧಾನ

ಸಾಂಸ್ಕೃತಿಕ ಅಧ್ಯಯನವೊಂದು ಬಹುಪಾಲು ಯಶಸ್ವಿಯೆಂದೆನಿಸಬೇಕಾದರೆ ಆಕರ ಸಂಗ್ರಹ ಮತ್ತು ಸಂಶೋಧನಾ ವಿಧಾನಗಳು ಬಹುಮುಖೀ ನೆಲೆಯಲ್ಲಿರಬೇಕು. ಏಕಮುಖವಾದ ವಿಧಾನವು ಸೀಮಿತಾರ್ಥದ ಫಲಿತವನ್ನಷ್ಟೇ ನೀಡಬಲ್ಲದು. ಇದು ಅಧ್ಯಯನವನ್ನು ಒಂದು ಕಕ್ಷೆಯೊಳಗೆ ನಿರ್ದಿಷ್ಟಗೊಳಿಸುತ್ತದೆ. ಆದ್ದರಿಂದ ಈ ಸಂಶೋಧನಾ ಕಾರ್ಯದಲ್ಲಿ ಭಗವತಿ ಆರಾಧನೆಯ ಕುರಿತ ಅಧ್ಯಯನವನ್ನು ಬಹುಮುಖೀ ದಾಖಲಾತಿ ವಿಧಾನದಲ್ಲಿ ನಡೆಸಲಾಗಿದೆ. ಈ ವಿಧಾನದಲ್ಲಿ ಮೂರು ವಿಧದ ಲಕ್ಷಣಗಳಿವೆ. ಆರಾಧನೆ ನಡೆಯುವ ಬೇರೆಬೇರೆ ಸ್ಥಳ–ಸಂದರ್ಭಗಳಿಗೆ ಭೇಟಿಯಿತ್ತು, ಕ್ಯಾಮರಾ ಉಪಯೋಗಿಸಿಕೊಂಡು ಫೋಟೋ, ವಿಡಿಯೋ ಸಂಗ್ರಹಿಸಿ, ಆರಾಧನಾ ಪಠ್ಯಗಳನ್ನು ಹಾಡುವಾಗ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿ ಬಹುನೆಲೆಯಲ್ಲಿ ಆಕರಗಳನ್ನು ಸಂಗ್ರಹಿಸುವುದು. ಇದನ್ನು 'ಅತ್ಯುತ್ತಮ ದಾಖಲಾತಿ' (Good Documentation) ವಿಧಾನ ಎಂದು ಕರೆಯುತ್ತಾರೆ. ಆರಾಧನೆಯ ಒಟ್ಟು ಪ್ರಕ್ರಿಯೆಯು ಪ್ರಾರಂಭವಾಗುವ ಮುಂಚಿತವಾಗಿ ಮತ್ತು ಕೊನೆಗೊಳ್ಳುವ ತನಕವೂ ಹಾಜರಿದ್ದು ಎಲ್ಲಾ ಮಾಹಿತಿಗಳನ್ನು ಕಲೆಹಾಕುವುದನ್ನು 'ಸಮಗ್ರ ದಾಖಲಾತಿ' (Complet Documentation) ವಿಧಾನ ಎನ್ನಲಾಗುತ್ತದೆ. ಸಂಗ್ರಹಿಸಿದ ಒಟ್ಟು ಆಕರಗಳಿಂದ ಕೂಡಿದ ಬೃಹತ್ ಮಾಹಿತಿ ಶರೀರ (Mega Text)ದಿಂದ ಅಧ್ಯಯನಕ್ಕೆ ಅವಶ್ಯವಾದವುಗಳನ್ನು ಸಂಯೋಜಿಸುವ ಬಗೆಯಲ್ಲಿ ಸಂಗ್ರಹಿಸುವುದನ್ನು 'ಸಾಂದ್ರ ದಾಖಲಾತಿ' (Thick Documentation) ವಿಧಾನ ಎನ್ನುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಈ ಮೂರು ಬಗೆಯ ಬಹುಮುಖೀ ದಾಖಲಾತಿ ವಿಧಾನಗಳನ್ನು ಅನುಸರಿಸಲಾಗಿದೆ. ಅಧ್ಯಯನ ವಿಧಾನದಲ್ಲಿ Inductive and Deductive methodಗಳನ್ನು ಅಳವಡಿಸಿಕೊಳ್ಳಲಾಗಿದೆ.

ಆರಾಧನಾ ಪಠ್ಯ ಬಹು ಸಂಕೀರ್ಣವಾದುದು. ಅದು ಗಾದೆ, ಒಗಟುಗಳಷ್ಟು ಸರಳವಲ್ಲ. ಕಲಾವಿದ, ಗಾಯಕ, ಭೌತಿಕ, ಸಾಹಿತ್ಯಿಕ, ಆಚರಣೆ, ಪ್ರದರ್ಶನ ಇವೆಲ್ಲವೂ ಸೇರಿರುವ ಒಂದು ಸಂಕೀರ್ಣ ಪಠ್ಯ (Complexive Text). ಸೈದ್ಧಾಂತಿಕವಾಗಿ ಭಗವತಿ ಆರಾಧನೆಯ ಪಠ್ಯಗಳನ್ನು ಅಧ್ಯಯನ ಮಾಡಲು ಕೇವಲ ಒಂದು ಸಿದ್ಧಾಂತ ಸಾಲದು. ಹಾಗಾಗಿ ಈ ಅಧ್ಯಯನಕ್ಕೆ ಮೌಖಿಕ ಪಠ್ಯಗಳ ರಾಚನಿಕ ಸ್ವರೂಪವನ್ನಿಟ್ಟುಕೊಂಡು ಅದನ್ನು ಪಠ್ಯಕೇಂದ್ರಿತ ಸಿದ್ಧಾಂತಕ್ಕೆ ಅನ್ವಯಗೊಳಿಸಿರುತ್ತೇನೆ. ಆರಾಧಯು ಯಾವಾಗ ನಡೆಯುತ್ತದೆ ಎನ್ನುವ ಕಾಲದೇಶ ಬದ್ಧವಾದ ನಿರ್ಣಯವನ್ನು ಕೈಗೊಳ್ಳುವುದಕ್ಕಾಗಿ 'ಸಂದರ್ಭ ಸಿದ್ಧಾಂತ'ವನ್ನು ಬಳಸಿಕೊಂಡಿರುತ್ತೇನೆ. ಅಲ್ಲದೆ, ಭಗವತಿ ಆರಾಧನೆ ಹೇಗೆ ನಡೆಯುತ್ತದೆ? ಅದು ಅಭಿವ್ಯಕ್ತಗೊಳ್ಳುವ ಬಗೆ ಹೇಗೆ? ಎನ್ನುವ ಶೋಧನೆಗಾಗಿ 'ಪ್ರದರ್ಶನ ಸಿದ್ಧಾಂತ'ವನ್ನು ಉಪಯೋಗಿಸಿಕೊಂಡಿದ್ದೇನೆ. ಹೀಗೆ ಎರಡು–ಮೂರು ಸಿದ್ಧಾಂತಗಳ ಆಧಾರದಲ್ಲಿ ಈ ಅಧ್ಯಯನವನ್ನು ನಡೆಸಲಾಗಿದೆ.

ಈ ಮಹಾಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಿವೆ. ಪ್ರಸ್ತಾವನೆಯಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನಗಳನ್ನು ಸ್ಪಷ್ಟಪಡಿಸಿದರೆ, ಮೊದಲ ಅಧ್ಯಾಯವು ಭಗವತಿ ಆರಾಧನೆಗಿರುವ ಹಿನ್ನೆಲೆ ಮತ್ತು ಚಾರಿತ್ರಿಕತೆಯನ್ನು ವಿಶದಪಡಿಸುತ್ತಾ ಅಧ್ಯಯನದ ವಿಷಯಕ್ಕೆ ಬೇಕಾದ ಆಧಾರ–ಆಕರಗಳನ್ನು ಸಮರ್ಥಿಸಿಕೊಳ್ಳುತ್ತದೆ. ಎರಡನೇ ಅಧ್ಯಾಯದಲ್ಲಿ ಸಂಶೋಧನಾ ವಿಷಯಕ್ಕಿರುವ ಸಾಂಸ್ಕೃತಿಕ ಸ್ವರೂಪವನ್ನು ವಿವಿಧ ವಿಧಿಬದ್ಧವಾದ ವಿವರಣೆಗಳ ಆಧಾರದಲ್ಲಿ ವಿಶ್ಲೇಷಿಸಲಾಗಿದೆ. ಅಧ್ಯಾಯ ಮೂರರಲ್ಲಿ ಕಲಾತ್ಮಕ ಪ್ರಕ್ರಿಯೆ ಮತ್ತು ಪರಿಕರಗಳ ಕುರಿತು ಸವಿವರವಾಗಿ ಚರ್ಚಿಸಿ ಭಗವತಿ ಆರಾಧನೆ ಎಂಬುದು ಒಂದು ಪರಿಪೂರ್ಣ ಆರಾಧನಾ ರಂಗಭೂಮಿ ಎಂದು ನಿರೂಪಿಸಲಾಗಿದೆ. ಮೌಖಿಕ ಪಠ್ಯಗಳು ನೀಡುವ ಸಾಹಿತ್ಯಕ ಮಹತ್ವ ಮತ್ತು ಚಾರಿತ್ರಿಕತೆಗಳನ್ನು ನಾಲ್ಕನೇ ಅಧ್ಯಾಯದಲ್ಲಿ ವಿಶ್ಲೇಷಣೆ

ನಡೆಸಿದರೆ, ಅಧ್ಯಾಯ ಐದರಲ್ಲಿ ಸಾಮಾಜಿಕ ಬದುಕಿನಲ್ಲಿ ಆರಾಧನೆಯು ಹಾಸುಹೊಕ್ಕಾಗಿರುವ ಬಗೆಯನ್ನು ಕೆಲವಾರು ಪರಿಕಲ್ಪನೆಗಳನ್ನಿಟ್ಟುಕೊಂಡು ವಿವರಿಸಿ ಆಚರಣಾತ್ಮಕ ವಿಧಿಗಳು ಆರಾಧನೆಯಂತಹ ಸಾಂಸ್ಕೃತಿಕ ಅಂಶವನ್ನು ರೂಪುಗೊಳಿಸಿಕೊಂಡ ರೀತಿಯನ್ನು ವಿಶ್ಲೇಷಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಕಾಲದಿಂದ ಕಾಲಕ್ಕೆ ಭಗವತಿ ಆರಾಧನೆಯ ವಿಧಿಗಳ ಮೇಲೆ ಆಧುನಿಕ ಮತ್ತು ವೈದಿಕ ಪ್ರಭಾವಗಳು ಬಿದ್ದಿರುವುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಸಮಾರೋಪ ಭಾಗದಲ್ಲಿ ಅಧ್ಯಯನದಲ್ಲಿ ಕಂಡುಕೊಂಡ ಮುಖ್ಯಾಂಶಗಳನ್ನು ಫಲಿತ – ತಾತ್ವಿಕತೆಯ ಅಂಶಗಳೊಂದಿಗೆ ಕ್ರೋಢೀಕರಿಸಲಾಗಿದೆ. ಪ್ರಬಂಧದ ಅಂತಿಮ ಭಾಗದಲ್ಲಿ ಪರಾಮರ್ಶನ ಗ್ರಂಥಸೂಚಿ, ಸಂಪನ್ಮೂಲ ವ್ಯಕ್ತಿವಿವರ ಸೇರಿದಂತೆ ಅಧ್ಯಯನಕ್ಕೆ ಪೂರಕವಾದ ಅನುಬಂಧಗಳನ್ನು ಸೇರಿಸಿಕೊಳ್ಳಲಾಗಿದೆ. ಕೆಲವು ಅಧ್ಯಾಯದಲ್ಲಿ ವಿಶ್ಲೇಷಿಸಿರುವ ವಿಷಯಗಳ ಸಮರ್ಥನೆ ಮತ್ತು ಸ್ಪಷ್ಟತೆಗಾಗಿ ಅಲ್ಲಲ್ಲೇ ಸಂಬಂಧಿತ ರೇಖಾಚಿತ್ರ ಮತ್ತು ಛಾಯಾಚಿತ್ರಗಳನ್ನು ನೀಡಲಾಗಿದೆ. ಅಧ್ಯಯನಕ್ಕೆ ಇಟ್ಟುಕೊಂಡಿರುವ ವಿಷಯವನ್ನು ಮೊದಲ ಭಾಗದಲ್ಲಿ ಪರಿಚಯಿಸಿ, ಅಧ್ಯಾಯಗಳಲ್ಲಿ ಅದು ಒಳಗೊಳ್ಳುವ ಮತ್ತು ಅದಕ್ಕೆ ಪೂರಕವಾದ ವಿಷಯಗಳನ್ನು ಚರ್ಚಿಸಿ, ಸಮಾರೋಪಕ್ಕಾಗುವಾಗ ಸಂಸ್ಕೃತಿರೂಪಣೆಯಲ್ಲಿ ಭಗವತಿ ಆರಾಧನೆಯು ವಹಿಸುವ ಪಾತ್ರವನ್ನು ಕಂಡುಕೊಳ್ಳುವ ಮಾದರಿಯಂತೆ ಇಲ್ಲಿ ವಿಧಾನವನ್ನು ಅನುಸರಿಸಲಾಗಿದೆ.

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಭಗವತಿ ಆರಾಧನೆಗೆ ಸಂಬಂಧಿಸಿದಂತೆ ಈ ವರೆಗೆ ಪ್ರಕಟಗೊಂಡಿರುವ ಕೃತಿಗಳು ಮತ್ತು ನಡೆದಿರುವ ಅಧ್ಯಯನಗಳು ತೀರಾ ವಿರಳ. ಹೀಗಿದ್ದರೂ ದತ್ತ ವಿಷಯವೊಂದರ ಸಂಶೋಧನೆಗೆ ಪ್ರವೇಶ ಪಡೆಯುವ ಮುನ್ನ ಆ ಬಗೆಗಿನ ಪೂರ್ವಸಾಹಿತ್ಯದ ಅವಲೋಕನ ಮತ್ತು ಇದುವರೆಗೆ ನಡೆದಿರುವ ಕೆಲವು ಮುಖ್ಯ ಅಧ್ಯಯನಗಳ ಸಮೀಕ್ಷೆ ನಡೆಸುವುದು ಅಗತ್ಯ.

ಮಲೆಯಾಳದಲ್ಲಿರುವ ಸಾಹಿತ್ಯದ ಸಮೀಕ್ಷೆ

ಭಗವತಿ ಆರಾಧನೆಗೆ ಸಂಬಂಧಿಸಿದ ಮಲೆಯಾಳ ಸಾಹಿತ್ಯವನ್ನು ಸಮೀಕ್ಷಿಸಿದಾಗ, ನಮಗೆ ಲಭಿಸುವ ಎರಡು ಪ್ರಾಚೀನ ಮಲೆಯಾಳ ಕೃತಿಗಳೆಂದರೆ **ದಾರುಕವಧಂ** ಮತ್ತು **ಕಾಳಿನಾಟಕಂ.**

ಭಗವತಿ ಆರಾಧನೆ ನಡೆಯುವ ಬಹುಭಾಗಗಳನ್ನು ಭೌಗೋಳಿಕವಾಗಿ ಕೇರಳ ರಾಜ್ಯವೇ ಒಳಗೊಳ್ಳುವುದರಿಂದ ಇದರ ಬಗ್ಗೆ ಕನ್ನಡ ಜಾನಪದ ಜಗತ್ತಿನಲ್ಲಿ ನಡೆದಿರುವ ಅಧ್ಯಯನ, ಪ್ರಕಟಿತ ಕೃತಿಗಳು ತೀರಾ ವಿರಳ. ಹಾಗೆಂದು ಮಲಯಾಳದಲ್ಲೂ ಭಗವತಿ ಆರಾಧನೆಯ ಬಗ್ಗೆ ಬೆರಳೆಣಿಕೆಯ ಅಧ್ಯಯನವನ್ನಷ್ಟೇ ಗುರುತಿಸಬಹುದು. ದಾಮೋದರ್ ನೀಲೇಶ್ವರರವರು ಬರೆದಿರುವ **'ಆರ್ಯನಾಡ್‌ಂಡೆ ಮಾದಾಕಮ್ಮಾರ್'** (೨೦೦೬) ಎಂಬ ಕೃತಿಯಲ್ಲಿ ಆರ್ಯನಾಡಿನಿಂದ ಉತ್ತರಕ್ಕೆ ಸಂಚಾರ ಮಾಡಿ, ಭಗವತಿಯರು ವಿವಿಧ ಸ್ಥಾನಗಳಲ್ಲಿ ನೆಲೆಯಾಗಿರುವ ಬಗ್ಗೆ ಮಾಹಿತಿಗಳಿವೆ. ಕೆಲವು ದೈವಕಥೆಗಳೂ, ಸ್ಥಳಪುರಾಣಗಳೂ ಇದರಲ್ಲಿವೆ. ಡಾ. ಆರ್.ಸಿ.ಕರಿಪತ್ತ್ರವರ **'ತೆಯ್ಯಂ ಪ್ರಪಂಚ'** (೨೦೧೨) ಎಂಬ ಕೃತಿಯು ಕೇರಳದ ತೆಯ್ಯಂ ಆರಾಧನೆಯ ವಿವಿಧ ಪ್ರಕಾರಗಳು, ಬಳಸುವ ಪರಿಕರಗಳು, ಜಾನಪದ ಪಠ್ಯಗಳು, ತೋಟ್ಟಂ ಹಾಡುಗಳು, ವೇಷಭೂಷಣ, ಮುಖವರ್ಣಿಕೆ, ಕುಣಿತ, ಮಾತುಗಾರಿಕೆ ಮುಂತಾದುವುಗಳ ಕುರಿತು ಸಮೃದ್ಧ ವಿಚಾರಗಳನ್ನು ನೀಡುತ್ತದೆ. ಬಗೆಬಗೆಯ ತೆಯ್ಯಂಗಳ ಅಪರೂಪದ ಭಾವಚಿತ್ರಗಳನ್ನೂ ಸಂಗ್ರಹಿಸಿಕೊಡುತ್ತದೆ.

ಶೇಖರ್ ಜಿ. ಯವರ **'ಕಡಂಕೊಟ್ಟು ಮಾಕ್ಕಂ'** (೨೦೧೧) ಕೃತಿಯು ಕೇರಳದ 'ತೆಯ್ಯಂಕಲೆ'ಯ ಬಗ್ಗೆ ವಿವರಗಳನ್ನು ನೀಡುತ್ತದೆ. ವಿದ್ವಾನ್ ಒ.ಟಿ. ಕರುಣಾಕರನ್‌ರವರ **'ಶ್ರೀ ಭದ್ರಕಾಳಿ (ಮಡಾಯಿಕಾವಿಲಮ್ಮೆ)'** (೨೦೦೫) ಮತ್ತು **'ನಿಲಮಂಗಲಂ'**(೨೦೧೪) ಎಂಬೆರಡು ಕೃತಿಗಳು ಮಾಡಾಯಿಕಾವು ಭಗವತಿ ಮತ್ತು ಕ್ಷೇತ್ರದ ಬಗ್ಗೆ ವಿಷಯಗಳನ್ನು ತಿಳಿಸುತ್ತವೆ. **'ನಿಲಮಂಗಲಂ'** ಕೃತಿಯಲ್ಲಿ ಉತ್ತರ ಕೇರಳದ ಭಗವತಿಯ ಆರಾಧನಾ ವಿಧಾನ ಮತ್ತು ಕ್ಷೇತ್ರಗಳ ಕುರಿತು ಮಾಹಿತಿಗಳಿವೆ. ಡಾ.ಸಿ. ಅಚ್ಚುತ ಮೆನನ್ ಅವರ **'ಕೇರಳತ್ತಿಲೆ ಕಾಳಿಸೇವಾ'** (೧೯೪೩), ವಿ. ಆನಂದ ಕುಟ್ಟನ್‌ರವರು ಸಂಪಾದಿಸಿರುವ **'ಕೇರಳ ಭಾಷಾ ಗಾನಂಗಳ್'** (೧೯೮೦), ಕೇಶವ ಪಟ್ಟೇರಿ ಮತ್ತು ಇತರರು ಸೇರಿ ಸಂಪಾದಿಸಿರುವ **'ಶ್ರೀ ನೀಲೇಶ್ವರ ಭಗವತಿ ಕ್ಷೇತ್ರಂ'** (೧೯೯೧) ಕೆ. ಗೋವಿಂದನ್ ಅಡಿಯೋಡಿಯವರ **'ತೆಯ್ಯವುಂ ತಿರವುಂ'** (೧೯೫೬), ರಾಮ ನಳಿಕೋಡ್ ರವರ **'ಮಾಡಾಯಿ ಕಾವಿಲಮ್ಮ** (೧೯೯೯) ಮುಂತಾದ ಕೃತಿಗಳಲ್ಲಿ ಭಗವತಿ ಆರಾಧನೆಯ ಕುರಿತು ಮಹತ್ವದ ವಿಚಾರಗಳಿವೆ.

ಕನ್ನಡದಲ್ಲಿರುವ ಸಾಹಿತ್ಯದ ಸಮೀಕ್ಷೆ

ಭಗವತಿ ಆರಾಧನೆಗೆ ಸಂಬಂಧಪಟ್ಟು ಕನ್ನಡದಲ್ಲಿ ಬಂದಿರುವ ಗ್ರಂಥಗಳಲ್ಲಿ ಡಾ. ಅಮೃತ ಸೋಮೇಶ್ವರರ **'ಭಗವತಿ ಆರಾಧನೆ–ಒಂದು ಅಧ್ಯಯನ** (೧೯೯೮) ಎನ್ನುವ ಕೃತಿ ಮಹತ್ವದ್ದಾಗಿದೆ. ಈ ಗ್ರಂಥವು ಭಗವತಿ ಎಂದರೆ ಯಾರು? ಭಗವತಿಯರ ಸಂಖ್ಯೆ, ಪ್ರಭೇದ, ಪುರಾಣ ಸಂಹಿತೆ, ಭಗವತಿಯೊಂದಿಗಿನ ಚಾಮುಂಡಿಯರು, ಪುರುಷ ದೈವಗಳು, ಹನ್ನೊಂದು ಭಗವತಿ ಸ್ಥಾನ ಘಟಕಗಳು, ವಾರ್ಷಿಕ ಆಚರಣಾತ್ಮಕ ಆವರ್ತನಗಳು, ಅನುಷ್ಠಾನ ವಿಧಿಗಳು, ಸೂಕ್ತಿಗಳು ಇತ್ಯಾದಿ ವಿಚಾರವಾಗಿ ಸವಿವರವಾದ ಮಾಹಿತಿ ನೀಡುತ್ತದೆ. ಕನ್ನಡ ಜಾನಪದ ಅಧ್ಯಯನದಲ್ಲಿ ಈ ಕೃತಿಗೆ ಅನನ್ಯವಾದ ಸ್ಥಾನವಿದೆ. ಭಗವತಿಯ ಕುರಿತಾಗಿ ಇಷ್ಟೊಂದು ಯಥೇಚ್ಛ ವಿವರಗಳಿರುವ ಕೃತಿ ಕನ್ನಡದಲ್ಲಿ ಇನ್ನೊಂದಿಲ್ಲ. ಹಾಗಾಗಿಯೇ ಪ್ರಸ್ತುತ ಅಧ್ಯಯನಕ್ಕೆ ಇದು ಮಹತ್ವದ ಮೂಲ ಆಕರವಾಗಿದೆ. ಇದೇ ಲೇಖಕರ **'ತುಳುವ ಜಾನಪದ –ಕೆಲವು ನೋಟಗಳು** (೨೦೦೭) ಎಂಬ ಸಂಶೋಧನಾ ಲೇಖನಗಳ ಸಂಕಲನದಲ್ಲಿಯೂ ಈ ಕುರಿತು 'ಭಗವತಿ ಆರಾಧನೆಯ ಒಂದು ಮುಖ' ಎಂಬ ಉಪಯುಕ್ತ ಲೇಖನವಿದೆ.

ವಿದ್ವಾನ್ ರಾಮಚಂದ್ರ ಉಚ್ಚಿಲ್ ಮತ್ತು ಡಾ.ಅಮೃತ ಸೋಮೇಶ್ವರರು ಸಂಪಾದಿಸಿರುವ **'ಪೂಮುಡಿ'** (೧೯೯೮) ಕೃತಿಯಲ್ಲಿ ಭಗವತಿಯ ಆರಾಧನಾ ವಿಧಾನಗಳ ಕುರಿತ ವಿಫುಲ ಮಾಹಿತಿ ಲಭಿಸುತ್ತದೆ. 'ಕಳಿಯಾಟಂ' ಎನ್ನುವ ಭಗವತಿ ಉತ್ಸವದ ಸ್ಮರಣೆಗಾಗಿಯೇ ಪ್ರಕಟಗೊಂಡಿರುವ ಈ ಕೃತಿಯು ಆ ಉತ್ಸವದ ವಿಧಿ ಕಲಾಪಗಳು, ಪರಿಕರಗಳು ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಕುರಿತಾಗಿ ವಿಶ್ಲೇಷಣೆ ನಡೆಸುತ್ತದೆ. ವಾಸುದೇವ ಉಪ್ಪಳರವರು ಬರೆದಿರುವ **'ಉಪ್ಪಳ ಭಗವತಿ ಕ್ಷೇತ್ರ'** (೧೯೬೭) ಮತ್ತು **'ಭಗವತಿ ಲೀಲಾಮೃತ'** (೨೦೦೦) ಎಂಬೆರಡು ಕೃತಿಗಳು ಉಪ್ಪಳದ ಐವರು ಭಗವತಿ ಮತ್ತು ಕುದ್ರೋಳಿಯ ಹದಿನಾಲ್ಕು ಭಗವತಿಯರ ಬಗ್ಗೆ ಕಥನ, ಆರಾಧನಾ ಕ್ರಮಗಳು, ಸ್ಥಳಪುರಾಣ, ಉತ್ಸವ ವಿಧಿಗಳು, ಪರಿಚಾರಕರ ಕಟ್ಟುಪಾಡುಗಳ ಬಗ್ಗೆ ಮಾಹಿತಿ ನೀಡುತ್ತದೆ. ಕೇಳುಮಾಸ್ತರ್ ಅಗಲ್ಪಾಡಿಯವರು **'ತೆಯ್ಯಂ ಕಥನ'** (೨೦೦೪) ಎಂಬ ಗ್ರಂಥದಲ್ಲಿ ಭಗವತಿಯರ ಪ್ರಭೇದಗಳು ಮತ್ತು ಭಗವತಿ ಸಂಕೀರ್ಣದ ಇತರ ದೈವಗಳ ಬಗ್ಗೆ ತಿಳಿಸಿದ್ದಾರೆ. ಜಯಮಾಸ್ತರ್ ಪ್ರಕಟಿಸಿರುವ **'ಶ್ರೀ ಭಗವತಿ ಮಹಾತ್ಮೆ'** (೧೯೪೪) ಯಕ್ಷಗಾನ ಕೃತಿಯು ಭಗವತಿಯ ಕಥಾನಕವನ್ನು ಆಧರಿಸಿದ ಪ್ರಸಂಗವಾಗಿದೆ. ಡಾ. ಮೋಹನ್ ಕುಂಟಾರ್‌ರವರು **'ಕೇರಳ ಕಥನ'** (೨೦೦೬) ಎಂಬ ಕೃತಿಯನ್ನು ಬರೆದಿದ್ದು, ಇದರಲ್ಲಿ ಕೇರಳದ ರಂಗಕಲೆಗಳು, ಧಾರ್ಮಿಕ ಕೇಂದ್ರಗಳು, ಸಾಂಪ್ರದಾಯಿಕ ಆಚರಣೆಗಳು, ತೆಯ್ಯಂ ಸಂಸ್ಕೃತಿಯ ಕುರಿತಂತೆ ವಿಶ್ಲೇಷಿಸಿದ್ದಾರೆ.

ಆಂಗ್ಲ ಭಾಷೆಯಲ್ಲಿರುವ ಸಾಹಿತ್ಯದ ಸಮೀಕ್ಷೆ

ಕೇರಳ ಸರಕಾರ ಕಾರ್ಯಯೋಜನೆಯಾಗಿ ಪ್ರಕಟಿಸಿರುವ '**Temples of Kasaragod Distric**t' (೧೯೯೦) ಕೃತಿಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿರುವ ದೇವಾಲಯಗಳೊಂದಿಗೆ ಭಗವತಿ ಕ್ಷೇತ್ರಗಳ ಬಗ್ಗೆಯೂ ಪರಿಚಯಾತ್ಮಕ ವಿವರಗಳಿವೆ. ಡಾ.ಯು.ಪಿ.ಉಪಾಧ್ಯಾಯರವರ '**Costal Karnataka'** (೧೯೯೬) ಮತ್ತು '**The Land of God'**(೧೯೯೮) ಎಂಬೆರಡು ಕೃತಿಗಳಲ್ಲಿ ಕರಾವಳಿಯ ಆರಾಧನಾ ಪ್ರಕಾರಗಳ ಬಗ್ಗೆ ವಿಶ್ಲೇಷಣೆ ನಡೆಸಿರುವ ಕೆಲವಾರು ಲೇಖನಗಳಿವೆ. ಬಿ.ಬಾಲಕೃಷ್ಣ ಪಿಳ್ಳೆಯವರು ಬರೆದಿರುವ **'Shree chotanikkara Devi**'(೨೦೧೪) ಕೃತಿಯಲ್ಲಿ ಚೋಟಾನಿಕ್ಕರ ಭಗವತಿಯ ಪುರಾಣ ಹಿನ್ನೆಲೆ, ಉತ್ಸವ ಕ್ರಮಗಳು, ಕ್ಷೇತ್ರ ಪರಿಚಯಗಳ ವಿಚಾರಗಳಿವೆ.

ಬಾಲಕೃಷ್ಣ ಪಿ.ಯವರ **'Kalari Payatta'** (೧೯೯೫), ವಿ.ಟಿ.ಇಂದುಚೂಡನ್‌ರವರ '**The Secreat Chamber'** (೧೯೯೯), ಡಾ.ಕೆ.ಕೆ.ಎನ್. ಕುರುಪ್‌ರವರ '**The cult of Theyyam and Hero Worship In Kerala'**(೧೯೭೩), ಡಾ.ಜೆ.ಜೆ. ಪಲ್ಲತ್‌ರವರ '**Theyyam**' (೧೯೯೫) ಡಾ.ಯು.ಪಿ. ಉಪಾಧ್ಯಾಯ ಮತ್ತು ಡಾ. ಸುಶೀಲಾ ಉಪಾಧ್ಯಾಯರವರ '**Bhootha Worship'** (೧೯೮೪) ಮುಂತಾದ ಕೃತಿಗಳಲ್ಲಿ ಭಗವತಿ ಆರಾಧನೆಯ ಅಧ್ಯಯನಕ್ಕೆ ಪೂರಕವಾಗುವ ಹಲವು ಸೈದ್ಧಾಂತಿಕವಾದ ಮಾಹಿತಿಗಳಿವೆ.

ಪತ್ರಿಕಾ ಲೇಖನ ಮತ್ತು ಸಂಚಿಕೆಗಳು

ಅಧ್ಯಯನಕ್ಕೆ ಸಂಬಂಧಪಟ್ಟಂತೆ **ತರಂಗ (**೨೦೧೦, ೨೦೧೨,೨೦೧೪), **ಜಾನಪದ ಕರ್ನಾಟಕ** (೨೦೦೬), **ಚಿಂತನ ಬಯಲು** (೨೦೧೪,೨೦೧೫,೨೦೧೬,೨೦೧೭), **ಉದಯವಾಣಿ** (೨೦೦೪,೨೦೧೩,೨೦೧೪), **ಜಗಲಿ** (೨೦೧೬) ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿವಿಧ ಸಂಶೋಧನಾ ಲೇಖನಗಳಲ್ಲಿ ಭಗವತಿ ಆರಾಧನೆಯ ವಿಚಾರಗಳಿವೆ.

ಅಲ್ಲದೆ, ವಿವಿಧ ಭಗವತಿ ಆರಾಧನಾಲಯಗಳು ಹೊರತಂದಿರುವ **'ಮಂಗಳ ಧ್ವನಿ**'(೨೦೧೨), **'ಶ್ರೀ ಭಗವತಿ'**(೨೦೧೧), **'ಕಲಶ'**(೨೦೧೪), **'ಕೂಟಕ್ಕಳ'**(೨೦೧೦), '**ಭರಣಿ**'(೧೯೯೫), '**ಸನ್ನಿಧಿ**'(೨೦೦೪), '**ಸಿರಿಕುರಲ್**'(೨೦೦೨), '**ಕನಿಲದೀಪಂ**'(೨೦೦೦), '**ಬಪ್ಪನಾಡಮ್ಮ**'(೨೦೦೫), '**ಶ್ರೀ ಕುರುಂಭಾ**'(೨೦೧೫) ಮುಂತಾದ ಸ್ಮರಣ ಸಂಚಿಕೆಗಳಲ್ಲಿ ಭಗವತಿ ಆರಾಧನೆಯ ಕುರಿತು ಸಮೃದ್ಧ ವಿಷಯಗಳಿವೆ.

ಅಧ್ಯಾಯ ಒಂದು: ಭಗವತಿ ಆರಾಧನೆಯ ಸ್ವರೂಪ ವಿವೇಚನೆ

ಭಗವತಿ ಆರಾಧನೆ ಎಂಬುದು ಭಾರತದ ಪ್ರಾಚೀನ ಶಕ್ತಿಯಾರಾಧನೆಯ ಕ್ರಮ. ಅದರ ಸ್ವರೂಪವನ್ನು ವಿವೇಚಿಸುವಾಗ ಶಕ್ತಿಯಾರಾಧನೆಯ ಕುರಿತು ಸ್ಪಷ್ಟ ಕಲ್ಪನೆಯಿರಬೇಕಾದದ್ದು ಅವಶ್ಯ. ಭಗವತಿಯನ್ನು ಶಕ್ತಿಕಲ್ಪನೆಯ ಪ್ರಭೇದವಾಗಿ ಮತ್ತು ಮಾತೃದೇವತೆಯ ಸ್ವರೂಪವಾಗಿ ಕಂಡುಕೊಂಡಾಗ ಮಾತ್ರ ಈ ಆರಾಧನಾ ಪ್ರಕಾರಕ್ಕೆ ಸಾಂಸ್ಕೃತಿಕ ಇತಿಹಾಸವೊಂದು ಲಭಿಸುತ್ತದೆ. ಆದ್ದರಿಂದ ಅಧ್ಯಯನದ ಪ್ರಾರಂಭದ ಅಧ್ಯಾಯವಾದ ಇದರಲ್ಲಿ ಆದಿಮಾನವನ ಕಾಲದಿಂದ ದೇವರು ಎಂಬ ಶಕ್ತಿ ಕಲ್ಪನೆಯು ಬೆಳೆದುಬಂದಿರುವ ಇತಿಹಾಸವನ್ನು ಅವಲೋಕಿಸಲಾಗಿದೆ. ಹೀಗೆ ಶಕ್ತಿಯಾರಾಧನೆಯು ಮುಂದುವರಿಯುತ್ತಾ ಬರುವಾಗ ಶಕ್ತಿಯನ್ನು ಹೆಣ್ಣಾಗಿ ಆನಂತರದಲ್ಲಿ ಮಾತೃದೇವತೆಯಾಗಿ ಪರಿಕಲ್ಪಿಸಿರುವುದಕ್ಕೆ ಕಾರಣಗಳನ್ನು ನೀಡಲಾಗಿದೆ. ಹೀಗೆ ಪರಿಕಲ್ಪಿಸಿಕೊಂಡ ಮಾತೃದೇವತೆಯ ಆರಾಧನೆಗಿರುವ ಪ್ರಾಚೀನತೆಯನ್ನು ವಿಶದಪಡಿಸಲಾಗಿದೆ. ಈ ಪ್ರಾಚೀನತೆಗೆ ಆಧಾರವಾಗಿ ವೇದ, ಮಹಾಭಾರತ, ಪುರಾಣೋಕ್ತ ಉಲ್ಲೇಖಗಳನ್ನೂ ಜಾನಪದ ಆಕರಗಳನ್ನೂ ಉದಾಹರಿಸಲಾಗಿದೆ. ಬೇರೆ ಬೇರೆ ಪ್ರದೇಶದಲ್ಲಿ ಮಾತೃದೇವತಾರಾಧನೆ ಎಂಬುದು ಪಡೆದುಕೊಂಡಿರುವ ರೂಪಾಂತರಗಳನ್ನು ತಿಳಿಸಲಾಗಿದೆ. ಇವುಗಳ ಪೈಕಿ ಭಗವತಿ ಎಂಬ ಶಕ್ತಿ ದೇವತೆಯ ಆರಾಧನೆಯ ಸ್ವರೂಪವನ್ನು ಮುಖ್ಯವಾಗಿ ಪರಿಗಣಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಭಗವತಿ ಆರಾಧನೆಗೆ ಸಂಬಂಧಿಸಿದ ಚಾರಿತ್ರಿಕತೆಯನ್ನು ಕೇರಳೋತ್ಪತ್ತಿ ಗ್ರಂಥ, ಮರುಮಕ್ಕತ್ತಾಯ ಪದ್ಧತಿ, ತೆಯ್ಯಂ ಆರಾಧನೆ, ಸಂಗಂ ಕಾಲದ ಶಿಲಪ್ಪದಿಕಾರಂ ಕೃತಿ, ಪಣಂಬೂರು ನಂದನೇಶ್ವರ ದೇಗುಲದ ೧೫೦೫ರ ಶಾಸನ, ೭ನೇ ಶತಮಾನದ ಪೊಳಲಿ ಸ್ತಂಭ ಶಾಸನ, ಅಮ್ಮುಂಜೆಯ ೭-೮ ನೇ ಶತಮಾನದ ಶಾಸನ, ೯-೧೦ನೇ ಶತಮಾನದ ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿರುವ 'ಭಗವತಿಯೇರುವೆಳ್ವತೆರದಿಂ...' ಉಲ್ಲೇಖ, ಅಡ್ಕದ ಅಗ್ನಿಸೇವೆಯ ಐತಿಹ್ಯ, ಮಂಜೇಶ್ವರದ ಮದನಂತೇಶ್ವರ ದೇಗುಲದ ಬಟ್ಟೆಬರಹ, ನಾರಾಯಣ ಗುರು ಐತಿಹ್ಯ, ಸಸಿಹಿತ್ತಿಲು ಸಾರಂತಾಯ ಗರಡಿಯ ತಾಮ್ರಪಟ್ಟಿಕೆ, ತ್ರಿಕಣ್ಣಾಡ್‌ನ ಪಾಂಡ್ಯಕಲ್ಲು, ನೀಲೇಶ್ವರದ ಪಾಡಾರ್ ಕೊಳ, ಐತಿಹಾಸಿಕ ಮುದಳಪಾರ, ಪಟ್ಟೋಲ ಪರಮಾರ್ಥ ಎಂಬ ಜನಪದ ಪಠ್ಯ ಹೀಗೆ ಬಹು ಬಗೆಯ ಪ್ರಾಚೀನ ದಾಖಲೆಗಳ ಆಧಾರದಲ್ಲಿ ವಿಶ್ಲೇಷಿಸಲಾಗಿದೆ.

ಭಗವತಿ ಎಂಬ ಹೆಸರಿನ ನಿಷ್ಪತ್ತಿ ಮತ್ತು ಆ ಹೆಸರಿಗಿರುವ ಬೇರೆ ಬೇರೆ ಅರ್ಥ ಸ್ವರೂಪವನ್ನು ವಿವರಿಸಲಾಗಿದೆ. ಭಗವತಿ ಎಂಬ ಹೆಸರು ಪ್ರಯೋಗಗೊಂಡಿರುವ ಕೆಲವಾರು ಹಳೆಯ ದಾಖಲೆಗಳನ್ನು ಅವಲೋಕಿಸಲಾಗಿದೆ. ಪೌರಾಣಿಕ ಪರಿಕಲ್ಪನೆಯಲ್ಲಿ ಭಗವತಿ ವ್ಯಕಗೊಳ್ಳುವ ಬಗೆಯನ್ನು ಪುರಾಣ ಮೂಲದ ಕತೆಗಳ ಹಿನ್ನೆಲೆಯನ್ನಿಟ್ಟುಕೊಂಡು ವಿಶ್ಲೇಷಿಸಲಾಗಿದೆ. ಜೈನರಲ್ಲಿ ಯಕ್ಷಿರೂಪದ ಭಗವತಿ ಮತ್ತು ಬೌದ್ಧರಲ್ಲಿ ತಾರಾ ಭಗವತಿಯರ ಕುರಿತು ಕಥೆಗಳಿವೆ. ಅವರಲ್ಲೂ ಭಿನ್ನ ಕಲ್ಪನೆ ರೂಪಗಳಲ್ಲಿ ಭಗವತಿ ಆರಾಧನೆ ರೂಢಿಯಲ್ಲಿತ್ತು ಎಂಬುದನ್ನು ಉದಾಹರಿಸಲಾಗಿದೆ.

ಭಗವತಿ ಒಬ್ಬಳಲ್ಲ. ಅಮೃತ ಸೋಮೇಶ್ವರ ತಮ್ಮ ಭಗವತಿ ಆರಾಧನೆ (೧೯೯೮) ಕೃತಿಯಲ್ಲಿ ೧೪೭ ಭಗವತಿಯರ ಹೆಸರಿನ ಪಟ್ಟಿಯನ್ನು ಕೊಟ್ಟರೆ ಪ್ರಸ್ತುತ ಅಧ್ಯಯನದಲ್ಲಿ ೪೦೩ ಭಗವತಿಯರ ಹೆಸರುಗಳ ಯಾದಿಯನ್ನು ನೀಡಲಾಗಿದೆ. ಪಟ್ಟಿಯಲ್ಲಿರುವ ಹೆಸರುಗಳ ಕಾರಣ, ಹಿನ್ನೆಲೆ ಮತ್ತು ವೈಶಿಷ್ಟ್ಯಗಳನ್ನು ಪರಿಶೀಲಿಸಲಾಗಿದೆ. ಈ ಸಂದರ್ಭದಲ್ಲಿ ಒಂದೇ ಭಗವತಿಗಿರುವ ಬೇರೆ ಬೇರೆ ಹೆಸರುಗಳು ಮತ್ತು ಅವುಗಳ ಕಾರಣವನ್ನು ವಿವರಿಸಲಾಗಿದೆ. ಸಂಗ್ರಹಿಸಿದ ಹೆಸರಿನ ಪಟ್ಟಿಯ ಆಧಾರದಲ್ಲಿ ಪುರಾಣ ಮೂಲದ ಭಗವತಿಯರು,

ದುರಂತ ಮೂಲದ ಭಗವತಿಯರು ಮತ್ತು ಸಾಹಸ ಮೂಲದ ಭಗವತಿಯರು ಎಂಬ ಮೂರು ವರ್ಗೀಕರಣ ಮಾಡಲಾಗಿದೆ. ಆರಾಧನೆಯ ರೀತಿಯನ್ನು ಇಟ್ಟುಕೊಂಡು ಕೋಲಸ್ವರೂಪದ ಭಗವತಿಯರು, ವೈದಿಕಾರಾಧನೆಯ ಭಗವತಿಯರು ಎಂಬ ಎರಡು ವಿಂಗಡನೆಗಳನ್ನು ಮಾಡಿ ಉದಾಹರಣೆ ಸಹಿತ ವಿವರಣೆಗಳನ್ನು ನೀಡಲಾಗಿದೆ. ಅಧ್ಯಾಯದ ಕೊನೆಯಲ್ಲಿ ಭಗವತಿಯ ಆರಾಧನಾಲಯಗಳನ್ನು ವಿವರಿಸುವಾಗ ತಾನ, ಕಾವು, ಕಳಗಂ, ಗುತ್ತಮ್ಮ ಸಾನ, ದೈಯ್ಯೊಂಗುಳೆ ಸಾನ, ದೈವಸ್ಥಾನ, ದೇವಸ್ಥಾನ, ಕ್ಷೇತ್ರ ಎಂಬ ಬೇರೆ ಬೇರೆ ವಿಧಗಳನ್ನೂ ಅವುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಲಾಗಿದೆ. ಮೊದಲ ಅಧ್ಯಾಯವು ಭಗವತಿ ಮತ್ತು ಆಕೆಯ ಆರಾಧನೆಯ ಕುರಿತ ಸಾಂಸ್ಕೃತಿಕ ಅಧ್ಯಯನಕ್ಕೆ ಬೇಕಾದ ಮುಖ್ಯ ಆಕರಗಳನ್ನು ಪರಿಚಯಿಸುತ್ತದೆ. ಆರಾಧನಾ .ವಿಚಾರವೊಂದು ಸಮಸ್ಯೀಕರಣಗೊಳ್ಳುವ, ಅಧ್ಯಯನ ಯೋಗ್ಯಗೊಳ್ಳುವ ಸಾಧ್ಯತೆಯನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎರಡು : ಭಗವತಿ ಆರಾಧನೆಯ ಸಾಂಸ್ಕೃತಿಕ ಸ್ವರೂಪ

ಭಗವತಿ ಆರಾಧನೆ ಎಂಬುದು ನಿರ್ದಿಷ್ಟ ಸ್ಥಳ, ಸಮುದಾಯ, ಕಾಲಕ್ಕೆ ಸೀಮಿತವಲ್ಲ. ಕಾವ್ಯಾತ್ಮಕತೆ, ತಾಂತ್ರಿಕ ಆಚರಣೆ, ಕಲಾತ್ಮಕತೆ, ಅಲಂಕಾರ ಕೌಶಲ್ಯ, ಪ್ರಯೋಗಶೀಲತೆ ಇವೆಲ್ಲವೂ ಭಗವತಿ ಆರಾಧನೆಯ ವಿಧಿವಿಧಾನಗಳನ್ನು ಒಂದೊಂದಾಗಿ ಅಧ್ಯಯನ ಮಾಡುವುದರಿಂದ ತಿಳಿದು ಬರುವ ಅಂಶಗಳಾಗಿವೆ. ಸಾಂಸ್ಕೃತಿಕ ಸ್ವರೂಪವೆಂಬುದು ಭಗವತಿ ಆರಾಧನೆಗೆ ಹೇಗೆ ನಿಗದಿಗೊಳ್ಳುತ್ತದೆ ಎಂಬುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಭಗವತಿ ಆರಾಧನೆಯ ವ್ಯಾಪ್ತಿ ಮತ್ತು ಪ್ರಸರಣವನ್ನು ಭೌಗೋಳಿಕ, ಸಾಮಾಜಿಕ ಮತ್ತು ಭಾಷಿಕ ನೆಲೆಗಳಲ್ಲಿ ತಿಳಿಸಲಾಗಿದೆ. ಈ ಸಂದರ್ಭಕ್ಕೆ ಆರಾಧನಾ ರಂಗದ ವ್ಯಾಪ್ತಿಯನ್ನು ತಿಳಿಸುವ ನುಡಿಗಟ್ಟುಗಳನ್ನು ಬಳಸಿಕೊಳ್ಳಲಾಗಿದೆ. ಕಳಿಯಾಟಂ, ಪೆರುಂಗಳಿಯಾಟಂ, ಭರಣಿ ಉತ್ಸವ , ನಡೋದಿ, ಕಲಶಂ, ಪೂರಂ, ಪಾಟ್, ಕೂಟಂ – ಅಡಿಯಂದ್ರಂ, ನವರಾತ್ರಿ, ಇಡವಂಪತ್ತ್, ತಿರಿಪುತ್ತರಿ, ಎಳನೀರು ಕೂಟ ಎಂಬ ೧೨ ಮುಖ್ಯ ವಿಧಗಳನ್ನು ಪ್ರತ್ಯೇಕ –ಪ್ರತ್ಯೇಕವಾಗಿ ವಿವರಿಸಿಕೊಂಡು ಭಗವತಿಯನ್ನು ಉತ್ತರ ಕೇರಳ ಮತ್ತು ದಕ್ಷಿಣ ತುಳುನಾಡುಗಳಲ್ಲಿ ಆರಾಧಿಸುವ ಪ್ರಭೇದಗಳನ್ನು ವಿಶ್ಲೇಷಿಸಲಾಗಿದೆ.

ಇವಲ್ಲದೆ ಕುರಿಮಾನಂ (ದಿನನಿಶ್ಚಯ) ಕಾಣಂ ಬೆಕ್ಕಳ್ (ಧನ ಮುಹೂರ್ತ) ಕಣಿ ಕಂಡಿಕ್ಕಳ್(ಗೊನೆ ಮುಹೂರ್ತ), ಕೊಳ್ಳಿಮುಹೂರ್ತ (ಮರ ಮುಹೂರ್ತ), ಕುಂಞೆ ಮುಹೂರ್ತ (ಮಗು ಮುಹೂರ್ತ) ಆನಪಂದಳ್ (ಆನೆ ಚಪ್ಪರ), ಭಂಡಾರ ಎಳುನ್ನೆಳುತ್ (ಭಂಡಾರ ಆಗಮನ) ಅರಿವಂದನ (ಅಕ್ಷತೆ ವಂದನೆ), ಕಳಸ್ಸಾಟ್ (ಕ್ಷೇತ್ರಶುದ್ಧಿ) ಕೊಡಿಯಲ ವೆಕ್ಕಳ್ (ಕೊಡಿಯೆಲೆ ಇಡುವುದು), ಕೊಡಿಯೇಟ್ಟಂ (ಧ್ವಜಾರೋಹಣ) ಇತ್ಯಾದಿ ಮುಖ್ಯ ಉತ್ಸವ ವಿಧಿಗಳ ವಿವರಣೆ ನೀಡಿ, ಆನಂತರದ ಸಾಂಸ್ಕೃತಿಕ ವಿಧಿವಿಧಾನಗಳನ್ನು ಪ್ರತಿ ಪ್ರಧಾನ ಮತ್ತು ತೆಯ್ಯಂ ಪ್ರಧಾನ ಎಂಬ ಎರಡು ವಿಭಾಗಗಳನ್ನಾಗಿಸಿ ವಿಶ್ಲೇಷಿಸಲಾಗಿದೆ.

ಭಗವತಿ ಆರಾಧನೆಯ ಸಾಂಸ್ಕೃತಿಕ ವಿಧಿವಿಧಾನಗಳ ಕುರಿತ ಇಷ್ಟು ವಿವರ ಪೂರ್ಣ ಅಧ್ಯಯನ ಇದೇ ಮೊದಲೆನ್ನಬಹುದು. ಆರಾಧಕ ವರ್ಗದ ಇಡೀ.ವರ್ಷದ ನಿವೇದನೆ, ಅಭಿಲಾಷೆ, ಸಂತೋಷ, ಸಂಕಷ್ಟ ಸಹಿತವಾದ ಮಾನಸಿಕ ಸ್ಥಿತ್ಯಂತರಗಳು ಭಗವತಿ ಆರಾಧನೆಯ ವಿವಿಧ ಪ್ರಕರಣಗಳಲ್ಲಿ ಮತ್ತು ಅವುಗಳನ್ನು ನಡೆಸುವ ವಿಧಿವಿಧಾನಗಳಲ್ಲಿ ವ್ಯಕ್ತಗೊಳ್ಳುತ್ತದೆ ಮತ್ತು ತೃಪ್ತಗೊಳ್ಳುತ್ತದೆ ಎಂಬುದನ್ನು ಈ ಅಧ್ಯಾಯದಲ್ಲಿ ವಿಶದಪಡಿಸಲಾಗಿದೆ.

ಅಧ್ಯಾಯ ಮೂರು: ಭಗವತಿ ಆರಾಧನೆಯಲ್ಲಿ ಕಲಾತ್ಮಕತೆ

ಅಲೌಕಿಕವಾಗಿ ನಿರೂಪಿಸಲಾದ ಭಗವತಿಯ ಆರಾಧನೆಯನ್ನು ಸಾಂಸ್ಕೃತಿಕವಾಗಿ ಬಿಂಬಿಸಲು ಕಲಾತ್ಮಕತೆಯ ಮಾಧ್ಯಮಗಳು ಉಪಯೋಗವಾಗುತ್ತವೆ. ವಿವಿಧ ಕಲಾಪ್ರಕಾರಗಳು ಭಗವತಿಯ ಚರಿತ್ರೆಯನ್ನು ಮತ್ತು ಆರಾಧನೆಯ ಸಂಕೀರ್ಣತೆಯನ್ನು ರೂಪಿಸುವುದರಿಂದ ಇದೊಂದು ಧಾರ್ಮಿಕ ರಂಗಭೂಮಿಯಾಗಿ ಕಂಡುಬರುತ್ತದೆ. ಇದು ನಿರ್ದಿಷ್ಟ ನಿಯಮಬದ್ಧವಾದ ರಂಗಪ್ರಕಾರ. ಇಲ್ಲಿ ಪ್ರೇಕ್ಷಕ ವರ್ಗದ ನಿರೀಕ್ಷೆ– ಅಪೇಕ್ಷೆಗಳಿಗೆ ಮನ್ನಣೆಯಿಲ್ಲ. ಅಭಿವ್ಯಕ್ತಿಗೆ ಒಂದು ಸಿದ್ಧ ಮಾದರಿಯಿದೆ. ಲೌಕಿಕ ರಂಗಭೂಮಿಗಿಂತ ಇದು ಭಿನ್ನವಾಗಿರುತ್ತದೆ.

ಭಗವತಿ ಆರಾಧನೆಯ ಕಲಾತ್ಮಕತೆ ಎಂಬುದು ಮುಖ್ಯವಾಗಿ ವ್ಯಕ್ತಗೊಳ್ಳುವುದು ಅದರ ಬಣ್ಣಗಾರಿಕೆಯ ಸಂದರ್ಭದಲ್ಲಿ ಈ ಬಣ್ಣಗಾರಿಕೆಗೆ ಸಂಬಂಧಿಸಿದಂತೆ ಮುಖವರ್ಣಿಕೆಯಲ್ಲಿ ಬಳಸುವ ಬಣ್ಣಗಳು, ಮುಖವಾಡಗಳು, ಪರಿಕರಗಳು, ವಿಧಗಳು ರೇಖಾ ವಿನ್ಯಾಸ ಇವುಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಭಗವತಿ ಆರಾಧನೆಯ ತೆಯ್ಯಂ ಸ್ವರೂಪಕ್ಕೆ ಬೇಕಾಗುವ ವೇಷಭೂಷಣಗಳ ಪ್ರತ್ಯೇಕ ಪ್ರತ್ಯೇಕ ಭಾವಚಿತ್ರಗಳನ್ನು ನೀಡಲಾಗಿದೆ. 'ತಿರುಮುಡಿ' ಎಂಬ ಹೆಗಲಿಗೆ ಕಟ್ಟಿಕೊಳ್ಳುವ ಕಲಾತ್ಮಕ ರಚನೆಯಲ್ಲಿರುವ ೧೮ ವಿಧಗಳ ಪಟ್ಟಿಯನ್ನು ಕೊಡಲಾಗಿದೆ ಮುಖವರ್ಣಿಕೆ, ವೇಷಭೂಷಣ, ತಿರುಮುಡಿ ಇವೆಲ್ಲವನ್ನು ಧರಿಸಿಕೊಂಡ ಭಗವತಿಯ ತೆಯ್ಯಂ ಸ್ವರೂಪ ಹೇಗಿರುತ್ತದೆ ಎಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ಒಂದು ರೇಖಾಚಿತ್ರವನ್ನು ನೀಡಲಾಗಿದೆ.

ಭಗವತಿ ಆರಾಧನೆಯಲ್ಲಿ ಬಳಸಲಾಗುವ ಆಯುಧಗಳು, ಅವುಗಳ ವಿನ್ಯಾಸ, ಬಳಕೆ, ಪ್ರಕಾರಗಳು ಇವುಗಳ ಮಾಹಿತಿಯನ್ನು ರೇಖಾಚಿತ್ರಗಳನ್ನು ಕೊಟ್ಟು ವಿಶ್ಲೇಷಣೆ ಮಾಡಲಾಗಿದೆ. ಆರಾಧನೆಯ ಸಂದರ್ಭದಲ್ಲಿ ಬಳಸುವ ಚೆಂಡೆಯೇ ಮೊದಲಾದ ವಾದ್ಯ ಪರಿಕರಗಳ ಕುರಿತು ಪ್ರತ್ಯೇಕವಾಗಿ ವಿವರಿಸಲಾಗಿದೆ. ಕಲಾತ್ಮಕತೆಯನ್ನು ವಿವರಿಸುವಾಗ 'ಕಳಂ' ಎಂಬ ಮಂಡಲಾರಾಧನಾ ವಿಧಾನವನ್ನು ಅವಶ್ಯವಾಗಿ ವಿವರಿಸಬೇಕು. ಆರಾಧನೆಯ ಸಂದರ್ಭದಲ್ಲಿ 'ಕಳಂ' ಬರೆಯುವುದಕ್ಕಿರುವ ಹಿನ್ನೆಲೆ, ಅದನ್ನು ಬರೆಯುವ ಕ್ರಮ–ನಿಯಮ, ಬೇಕಾಗಿರುವ ವಸ್ತು–ಪರಿಕರಗಳು, ಅವುಗಳನ್ನು ತಯಾರಿಸುವ ವಿಧಾನ, ಕಳಂ ಅಳಿಸುವ ರೀತಿ ಹೀಗೆ ಸವಿಸ್ತಾರವಾದ ವಿವರಣೆಯನ್ನು ನೀಡಲಾಗಿದೆ.

ಭಗವತಿ ಆರಾಧನೆಯಲ್ಲಿರುವ ಕುಣಿತದ ಪ್ರಕಾರಗಳನ್ನು ತಿಳಿಸುವಾಗ ಕಾಲಾಟ, ಕಲಾಶಂ, ತಾಲಪ್ಪೊಲಿ, ಆಯಿರತಿರಿ, ಮುಂತಾದವುಗಳನ್ನು ಉದಾಹರಿಸಲಾಗಿದೆ. ಕಲಾತ್ಮಕವಾಗಿ ಆರಾಧನೆಯು ವ್ಯಕ್ತಗೊಳ್ಳುವ ಸಂದರ್ಭದಲ್ಲಿ ಸಾಂಕೇತಿಕತೆ ಎಷ್ಟು ಪರಿಣಾಮಕಾರಿಯಾಗಿ ಬಳಕೆಯಾಗುತ್ತದೆ. ಎಂಬುದನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಕಲಾತ್ಮಕ ಅಂಶಗಳು ಭಗವತಿ ಆರಾಧನೆಯನ್ನು ಆಕರ್ಷಕ ಮತ್ತು ಪ್ರಭಾವಶಾಲಿಯನ್ನಾಗಿಸುತ್ತವೆ. ವಾಸ್ತವಿಕ ರಂಗಭೂಮಿಯಿಂದ ಅದನ್ನು ಪ್ರತ್ಯೇಕಗೊಳಿಸುತ್ತವೆ. ಕಣ್ಣೆದುರು ಇಲ್ಲದ್ದನ್ನೇ ವಿವಿಧ ಸಾಂಕೇತಿಕತೆಗಳ ಮೂಲಕ ಮರುರಚಿಸುತ್ತವೆ. ಭಗವತಿಯು ವ್ಯಕ್ತಿ ಮಾಧ್ಯಮದ ಮೂಲಕ ವ್ಯಕ್ತಗೊಳ್ಳುವಾಗ ಆ ಸನ್ನಿವೇಶ ಮತ್ತು ವ್ಯಕ್ತಿಯನ್ನು ವಿಜೃಂಭಿಸುವಂತೆ ಅನನ್ಯವನ್ನಾಗಿಸುವುದೇ ಆರಾಧನೆಯಲ್ಲಿ ಕಲಾತ್ಮಕತೆಯು ಸೇರಿಕೊಂಡಿರುವುದರ ಮುಖ್ಯ ಉದ್ದೇಶ.

ಅಧ್ಯಾಯ ನಾಲ್ಕು: ಭಗವತಿ ಆರಾಧನೆಯ ಮೌಖಿಕ ಪಠ್ಯಗಳು

ಭಗವತಿ ಆರಾಧನೆಯ ಸ್ವರೂಪ ಮತ್ತು ಅನನ್ಯತೆಯನ್ನು ನಿರ್ಧರಿಸುವಲ್ಲಿ ಮೌಖಿಕ ಪಠ್ಯಗಳ ಪಾತ್ರ ಹಿರಿದು. ತೋಟ್ಟಂ, ಸುದಿಪ್ಪ್, ಪಾಟ್‌ಗಳು ಪದ್ಯ ರೂಪದಲ್ಲಿ ಭಗವತಿಯ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಹೇಳಿದರೆ, ಬಾಕ್‌ಮಾನ ಎಂಬುದು ಗದ್ಯ ಪಠ್ಯಗಳೊಂದಿಗೆ ತಿಳಿಸುತ್ತದೆ. ಈ ಸಂದರ್ಭದಲ್ಲಿ ಮೇಲಿನ ನಾಲ್ಕು ಮೌಖಿಕ ಪಠ್ಯಗಳನ್ನು ಅವುಗಳ ಅರ್ಥ ಸ್ವರೂಪ, ಪ್ರಕಾರಗಳ ವಿವರಣೆಗಳೊಂದಿಗೆ ವಿಶ್ಲೇಷಣೆ ಮಾಡಲಾಗಿದೆ. ಪ್ರತಿ ವಿಧಕ್ಕೂ ಮಲೆಯಾಳ ಮೂಲ ಪಠ್ಯಗಳ ಉದಾಹರಣೆಯನ್ನು ಕನ್ನಡ ಅನುವಾದದೊಂದಿಗೆ ನೀಡಲಾಗಿದೆ. ಭಗವತಿಗೆ ಸಂಬಂಧಿಸಿದ ಮಲೆಯಾಳದ ಪಠ್ಯಗಳು ಅದರ ಕನ್ನಡ ಅನುವಾದ ಸಹಿತ ಇಷ್ಟು ವಿಫುಲವಾಗಿ ಲಭಿಸುವಂತೆ ಮಾಡಿರುವುದು ಈ ಅಧ್ಯಾಯದ ಮುಖ್ಯ ಅಂಶವೆನ್ನಬೇಕು.

ಮೌಖಿಕ ಪಠ್ಯಕ್ಕೂ ಆರಾಧನೆಗೂ ಸಾಂಸ್ಕೃತಿಕ ಸಂಬಂಧವಿದೆ. ಪಠ್ಯದ ಕತೆಯೇ ಆರಾಧನೆಯಲ್ಲಿ ಕಲಾತ್ಮಕವಾಗಿ ಪುನರ್ ಸೃಷ್ಟಿಗೊಳ್ಳುತ್ತದೆ. ಈ ಸಾಧ್ಯತೆಯನ್ನು ಇಟ್ಟುಕೊಂಡು ಚೀರುಂಭ ಭಗವತಿ, ಮುಚ್ಚಿಲೋಟ್ ಭಗವತಿ ಮತ್ತು ಪುಲಿಕರಿಂಕಳಿ ಭಗವತಿ ಎಂಬ ಮೂರು ವಿಶೇಷ ಭಗವತಿಯರ ಆರಾಧನೆಯ ಸಂದರ್ಭದಲ್ಲಿ ಮೌಖಿಕ ಪಠ್ಯದೊಳಗಿನ ವಿಚಾರಗಳು ಅಭಿವ್ಯಕ್ತಗೊಳ್ಳುವುದನ್ನು ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಈ ಮೌಖಿಕ ಪಠ್ಯಗಳೆಲ್ಲವೂ ವಿಶೇಷ ಪದ, ಪ್ರಾಸ, ಅಲಂಕಾರ, ಲೋಕೋಕ್ತಿ ಪ್ರಯೋಗಗಳುಳ್ಳ ರಸಗಾವ್ಯಗಳು. ಈ ಎಲ್ಲಾ ಅಂಶಗಳನ್ನು ಈ ಅಧ್ಯಾಯದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಉದಾಹರಣೆಗಳೊಂದಿಗೆ ವಿಶ್ಲೇಷಿಸಲಾಗಿದೆ. ಮಲೆಯಾಳ ಜಾನಪದ ಸಾಹಿತ್ಯದ ಮಹತ್ವ ಮತ್ತು ಪಕ್ವತೆಗಳನ್ನು ತಿಳಿಯಲು ಇದು ಅವಶ್ಯ ಭಾಗ. ಇದೇ ಸಂದರ್ಭದಲ್ಲಿ ಭಗವತಿಯ ಕುರಿತಾಗಿ ಮೌಖಿಕ ಪಠ್ಯದಲ್ಲಿರುವ ಪ್ರಾತಿನಿಧಿಕ ಕಥನವನ್ನು ಸವಿವರವಾಗಿ ವಿಶ್ಲೇಷಣೆ ನಡೆಸಲಾಗಿದೆ. ಪಾಠಾಂತರಗಳನ್ನು ಇಟ್ಟುಕೊಂಡು ಯಥಾರ್ಥವನ್ನು ವಿವೇಚಿಸಲಾಗಿದೆ.

ಭಗವತಿ ಆರಾಧನೆಯನ್ನು ಸಾಹಿತ್ಯಿಕವಾದ ಆಕರಗಳು ಹೇಗೆ ಪರಿಣಾಮಕಾರಿಯಾಗಿ ನಿರೂಪಿಸುತ್ತವೆ ಮತ್ತು ಸಮರ್ಥಿಸಿಕೊಳ್ಳುತ್ತವೆ ಎಂಬುದನ್ನು ಈ ಅಧ್ಯಾಯದಲ್ಲಿ ಸ್ಪಷ್ಟಪಡಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಐದು: ಭಗವತಿ ಆರಾಧನೆ: ಆಚರಣೆ ಮತ್ತು ಸಮಾಜ

ಆರಾಧನೆಯೊಂದರ ಮುಖ್ಯ ಆಶಯವೇ ದೈವಭಯ ಹುಟ್ಟಿಸಿ ಸಮಾಜವನ್ನು ನೈತಿಕ ಮಾರ್ಗದತ್ತ ನಿರ್ದೇಶಿಸುವುದು. ಭಗವತಿ ಆರಾಧನೆ ಬಹುಮುಖಿ ಆಚರಣೆಗಳುಳ್ಳ ಜಗತ್ತು. ಈ ಉಪಾಸನಾ ಪ್ರಕಾರವು ಅನನ್ಯವಾಗುವುದಕ್ಕೆ ಹತ್ತಾರು ಕಾರಣಗಳಿವೆ. ಈ ಎಲ್ಲಾ ಅಂಶಗಳನ್ನು ವಿಶ್ಲೇಷಣೆ ನಡೆಸುವುದಕ್ಕಾಗಿ ಈ ಅಧ್ಯಾಯವನ್ನು ಬಳಸಿಕೊಳ್ಳಲಾಗಿದೆ. ಚಿಕಿತ್ಸಾತ್ಮಕ ಪದ್ಧತಿಯಾಗಿ ಜನರ ಬಹುವಿಧ ವ್ಯಾಧಿಗಳಿಗೆ ಭಗವತಿ ಆರಾಧನೆಯು ತನ್ನದೇ ಆದ ರೀತಿಯಲ್ಲಿ ಪರಿಹಾರ ಸೂಚಿಸುತ್ತದೆ. ಪ್ರೇತಬಾಧೆಯಂತಹ ಸಮಸ್ಯೆಗಳಿಗೂ ಚಿಕಿತ್ಸೆ ನೀಡುವುದರಿಂದ ಇದು ಮನೋವೈಜ್ಞಾನಿಕ ನೆಲೆಯಲ್ಲೂ ಮುಖ್ಯವಾಗುತ್ತದೆ. ಇಂತಹ ಕೆಲವು ಸಂದರ್ಭಗಳನ್ನು ಇಲ್ಲಿ ವಿವರಿಸಲಾಗಿದೆ. ಭಗವತಿ ಆರಾಧನೆಯ ಗಂಭೀರ ಅಭಿವ್ಯಕ್ತಿಯಲ್ಲಿ ರಸವೈವಿಧ್ಯತೆ ಮತ್ತು ಆಕರ್ಷಣೆ ಮೂಡಿಸಲು ಮನೋರಂಜನಾತ್ಮಕ ಅಂಶಗಳಿದ್ದು ಅವನ್ನೂ ಗುರುತಿಸಲಾಗಿದೆ.

ಮಾತೃದೇವತಾರಾಧನೆ ಮುಖ್ಯವಾಗುವುದೇ ಅದರೊಳಗೆ ಅಡಕವಾಗಿರುವ ಫಲವಂತಿಕೆಯ ಆಚರಣೆಗಳಿಂದ. ಅಂತಹ ಆಚರಣೆಗಳನ್ನು ಉದಾಹರಣೆ ಸಹಿತ ವಿಶ್ಲೇಷಣೆ ನಡೆಸಲಾಗಿದೆ. ಭಗವತಿ ಆರಾಧನೆಯು ಕೌಟುಂಬಿಕ ಕಾರ್ಯಗಳಿಗೆ ಪ್ರಭಾವ ಬೀರುವ ಬಗೆ, ಆರಾಧನೆಯಲ್ಲಿ ತೊಡಗಿಸಿಕೊಂಡಿರುವ ಆಚಾರ ಪಟ್ಟವ(ಧಾರ್ಮಿಕ ಕರ್ಮಿಗಳು)ರ ನಿಯಮ–ನಿರ್ಬಂಧ, ಆಯ್ಕೆಯ ವಿಧಾನ, ಪಾಲಿಸಬೇಕಾದ ಶುದ್ಧಾಚರಣೆಯ ಪರಿಕಲ್ಪನೆ ಇವೆಲ್ಲವನ್ನು ವಿವೇಚಿಸಲಾಗಿದೆ. ಭಗವತಿ ಆರಾಧನೆಯು ಇತರ ಎಲ್ಲಾ ಆರಾಧನಾ ವಿಧಾನಗಳಿಗಿಂತ ಹೇಗೆ ಅನನ್ಯವಾಗಿದೆ ಎಂಬುದನ್ನೂ ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಮಲೆಯಾಳಂ, ತುಳು ಮತ್ತು ಕನ್ನಡ ಭಾಷಿಕ ಜನರ ಪಾಲ್ಗೊಳ್ಳುವಿಕೆಯೇ ಈ ಆರಾಧನೆಯು ವಿಶೇಷವೆಂದೆನಿಸುವುದಕ್ಕೆ ಮುಖ್ಯ ಕಾರಣ. ಇದು ಆರಾಧನೆಗೆ ಬಹುತ್ವದ ಬಲವನ್ನು ಒದಗಿಸಿದೆ. ವಿವಿಧ ಸಮುದಾಯಗಳು ತಮ್ಮ ಕಾಲಧರ್ಮ, ಭಾಷೆ, ಕಸುಬುಗಳ ಕಾರಣಗಳಿಗಾಗಿ ಭಗವತಿಯನ್ನು ಕುಲದೇವತೆಯನ್ನಾಗಿ ಆರಾಧಿಸುತ್ತವೆ ಎಂಬ ಫಲಿತವನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಅಧ್ಯಾಯ ಆರು: ಭಗವತಿ ಆರಾಧನೆಯ ಇಂದಿನ ಸ್ವರೂಪ ಮತ್ತು ಮಾರ್ಪಾಡುಗಳು

ಯಾವುದೇ ಆರಾಧನಾ ಪದ್ಧತಿಗೆ ಸ್ಥಿರರೂಪ ಇರುವುದಿಲ್ಲ ಅದು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬರುತ್ತದೆ.

ಭಗವತಿ ಆರಾಧನೆಯ ಸಾಂಸ್ಕೃತಿಕ ಸ್ವರೂಪದಲ್ಲಾಗಿರುವ ಬದಲಾವಣೆಗಳಲ್ಲಿ ಕೆಲವು ಆಧುನಿಕ ಪ್ರಭಾವದಿಂದಾಗಿದ್ದರೆ, ಕೆಲವು ವಲಸೆ ಸಂಸ್ಕೃತಿಯಾಗಿ ಸ್ಥಾನಾಂತರಗೊಳ್ಳುವಾಗ ಉಂಟಾಗಿರುವುದಾಗಿದೆ. ಕೆಲವು ಮಹತ್ವವನ್ನು ಕಳೆದುಕೊಂಡರೆ ಇನ್ನೂ ಕೆಲವು ಹೊಸ ರೂಪದಲ್ಲಿ ಜಾರಿಯಲ್ಲಿವೆ. ಈ ಅಧ್ಯಾಯದಲ್ಲಿ ಭಗವತಿ ಆರಾಧನೆಯಲ್ಲಿ ವೈದಿಕತೆಯ ಪ್ರವೇಶ ಮತ್ತು ಆಧುನಿಕತೆಯ ಪ್ರಭಾವ ಇವೆರಡು ಕಾರಣಗಳಿಗಾಗಿ ಆಗಿರುವ ಪಲ್ಲಟಗಳನ್ನು ಉದಾಹರಣೆಗಳ ಸಹಿತ ವಿವರಿಸಲಾಗಿದೆ. ಮೂಲ ಸಂಪ್ರದಾಯವು ಬದಲಾಗಿ ಪರ್ಯಾಯ ಪದ್ಧತಿಗಳು ರೂಢಿಗೊಳ್ಳಲು ಕಾರಣವಾದ ಅಂಶಗಳನ್ನು ಗುರುತಿಸಲಾಗಿದೆ. ಆರಾಧನೆಯಲ್ಲಿರುವ ಕರ್ಮ, ವರ್ಗ, ಜನತೆ, ಸೌಲಭ್ಯ ಇವುಗಳಿಂದಾಗಿ ಆರಾಧನೆಯ ಪಾರಂಪರಿಕ ಸ್ವರೂಪಕ್ಕೆ ಧಕ್ಕೆಯಾಗಿರುವ ಕಾರಣಗಳನ್ನು ವಿಶ್ಲೇಷಿಸಲಾಗಿವೆ. ಹೀಗಿದ್ದರೂ ಅನಾದಿ ಕಾಲದಿಂದ ನಡೆದುಕೊಂಡು ಬಂದಿರುವ ಆರಾಧನಾ ಪದ್ಧತಿಯೊಂದು ಇಂದಿನ ಕಾಲಕ್ಕೆ ಎಷ್ಟು ಪ್ರಸ್ತುತ? ಎಂಬ ಪ್ರಶ್ನೆಯನ್ನು ಎತ್ತಲಾಗಿದೆ. ಇದಕ್ಕೆ ಉತ್ತರವನ್ನು ಕಂಡುಕೊಳ್ಳುವ ಸಂದರ್ಭದಲ್ಲಿ ಭಗವತಿ ಆರಾಧನೆಯು ಭವಿಷ್ಯಕ್ಕೂ ದಾಟಬೇಕಿದ್ದರೆ ಅವಶ್ಯವಾಗಿ ನಡೆಯಬೇಕಾದ ಪರಿವರ್ತನೆ, ಜನರ ಜವಬ್ದಾರಿ, ಸಮಾಜದ ಕರ್ತವ್ಯಗಳನ್ನು ಮನದಟ್ಟು ಮಾಡಲಾಗಿದೆ.

ಸಮಾರೋಪ

ಸಂಶೋಧನೆ ಎನ್ನುವುದು ಒಂದು ಸೃಜನಾತ್ಮಕ ಮತ್ತು ಬೌದ್ಧಿಕವಾದ ಚಟುವಟಿಕೆ. ಆಕರಗಳು ನಶಿಸಿಹೋಗುತ್ತದೆ ಇಲ್ಲವೇ ಅಪ್ರಕಟಿತ ಎಂಬೆರಡೇ ಕಾರಣಕ್ಕೆ ಆರಾಧನಾ ಪ್ರಕಾರವೊಂದರ ಸಂಶೋಧನೆ ನಡೆಸಲಾಗದು. ಅದು ಜನಜೀವನದ ಜೊತೆಜೊತೆಗೆ ಲೋಕದ ನಂಬಿಕೆಯಿರುವಷ್ಟು ಕಾಲ ತನ್ನ ಪಾಡಿಗೇ ಮುಂದುವರಿಯುತ್ತದೆಯಷ್ಟೆ. ಆರಾಧನಾ ವಿಷಯಾಧಾರಿತ ಅಧ್ಯಯನವೊಂದು ನಡೆಯುವ ಆಚರಣೆ ಮತ್ತು ಅದರ ಹಿನ್ನೆಲೆಯ ಬೇರೆ ಬೇರೆ ಅಮೂರ್ತ ಸಂಗತಿಗಳನ್ನು ವಿಶ್ಲೇಷಿಸುತ್ತದೆ. ಆ ಆರಾಧನೆಯ ಸುತ್ತಲು ಒಂದು ಸೈದ್ಧಾಂತಿಕ ಚೌಕಟ್ಟನ್ನು ಹೆಣೆಯುವ ಪ್ರಯತ್ನ ಮಾಡುತ್ತದೆ. ಆ ಆರಾಧನೆಯ ಕುರಿತ ಪ್ರಚಲಿತ ಜ್ಞಾನವನ್ನು ಹೆಚ್ಚಿಸುತ್ತದೆ. ಇಂತಹ ಸಂದರ್ಭದಲ್ಲಿ ಕಂಡುಕೊಳ್ಳುವ ಸತ್ಯ ಆರಾಧಕ ವ್ಯಕ್ತಿ ಅಥವಾ ವರ್ಗಕ್ಕೆ ಉಪಯೋಗಕಾರಿಯಾಗದೆ ಇರಬಹುದು. ಆದರೆ ಬಹುತ್ವದ ಸಂಸ್ಕೃತಿಯ ಮಧ್ಯದಲ್ಲಿ ಆರಾಧನೆಯ ಉಪಸಂಸ್ಕೃತಿಯೊಂದು ಬಲಗೊಳ್ಳುವುದಂತೂ ನಿಜ. ಸಾಮಾನ್ಯ ಅಥವಾ ನಗಣ್ಯವೆಂದು ನಿರ್ಲಕ್ಷಿಸಿದ ಉಪಸಂಸ್ಕೃತಿಯೊಂದಕ್ಕೆ ಸೈದ್ಧಾಂತಿಕ ಮತ್ತು ವೈಜ್ಞಾನಿಕ ಆಕರ–ಆಧಾರಗಳು ಒದಗುತ್ತವೆ. ವೈಜ್ಞಾನಿಕ ಜಗತ್ತಿನ ಸವಾಲುಗಳಿಗೆ ಉತ್ತರವಾಗಿ ನಿಲ್ಲುತ್ತದೆ.

ಭಗವತಿ ಆರಾಧನೆಯಂತಹ ಉಪಾಸನಾ ಪರಿಕ್ರಮಗಳು ವೈದಿಕತೆಯೊಂದಿಗೆ ನೇರ ಸಂಬಂಧ ಹೊಂದಿರುವುದರಿಂದ ಮತ್ತು ಅದರ ಗಾಢ ಪರಿಣಾಮಕ್ಕೆ ಒಳಗಾಗಿರುವುದರಿಂದ ಸ್ಥಿತ್ಯಂತರದ ಅಪಾಯ ಹತ್ತಿರದಲ್ಲಿದೆ. ಸಮುದಾಯದೊಳಗೆ ಮಾತ್ರ ಜನಪದ ಆಚರಣೆಗಳು ನಡೆಯುವುದರಿಂದ ಸಮುದಾಯಗಳ ಬದ್ಧತೆ, ಒಗ್ಗಟ್ಟು, ಆಸಕ್ತಿ ತಪ್ಪಿಹೋದರೆ ಅದು ತನ್ನ ಮೂಲ ದೇಸೀಸ್ವರೂಪವನ್ನು ಕಳಚಿಕೊಳ್ಳುವ ಸಾಧ್ಯತೆಗಳಿವೆ. ಈ ಅಧ್ಯಯನದಲ್ಲಿ ಪರಿಗಣಿಸಲಾದ ಮೌಖಿಕ ಸಾಹಿತ್ಯ, ಜನಪದ ಆಚರಣೆ–ನಂಬಿಕೆಗಳು ನಿನ್ನೆ ಮೊನ್ನೆಯದ್ದಲ್ಲ. ಸುದೀರ್ಘ ಕಾಲದಿಂದ ಜನ ಬದುಕಿನೊಂದಿಗೇ ರೂಢಿಗತವಾಗಿ ಬಂದಿರುವಂತದ್ದು. ಮೌಖಿಕ ಪರಂಪರೆಗಳೆಂದು ಹೇಳಿದರೂ ಅದು ಮೌಖಿಕವಲ್ಲದ ಅಕ್ಷರಸ್ಥ ವರ್ಗಕ್ಕೆ ಬುನಾದಿ ಹಾಕಿಕೊಡುವಂತಾದದ್ದು ಅದೊಂದು ಜ್ಞಾನಶಾಖೆಯಾಗಿ ಬದಲಾದುದರಿಂದಲೇ. ಪ್ರಸ್ತುತ ಅಧ್ಯಯನವು ಈ ಬಗೆಯಲ್ಲಿ ಆಕರಗಳನ್ನು ಪರಿಗಣಿಸಿದೆ.

ಈ ನಿಟ್ಟಿನಲ್ಲಿ ಕೇರಳ ಮತ್ತು ಕರ್ನಾಟಕದಲ್ಲಿ ಪ್ರಸಾರಗೊಂಡಿರುವ ಭಗವತಿ ಆರಾಧನೆಯ ಸೀಮಿತ ವ್ಯಾಪ್ತಿಯ ಅಧ್ಯಯನದಲ್ಲಿ ಆರಾಧನೆಯ ಚಾರಿತ್ರಿಕ, ಪೌರಾಣಿಕ ಸ್ವರೂಪಗಳನ್ನು ವಿಶ್ಲೇಷಿಸುವುದು ಮುಖ್ಯವಷ್ಟೆ. ಭಗವತಿ ಕುರಿತಾಗಿ ಇರುವ ಪ್ರಾಚೀನ ಉಲ್ಲೇಖಗಳು, ನಂಬಿಕೆಗಳು, ಆಚರಣೆಗಳು, ಆರಾಧನಾ ವಿಧಿ ವಿಧಾನಗಳು ಮುಂತಾದವುಗಳ ನೆರವಿನಿಂದ ಭಗವತಿ ಆರಾಧನೆಯಲ್ಲಿ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸುವುದು ಸಾಧ್ಯ. ನೈತಿಕತೆಯನ್ನು ಪೋಷಿಸುವಲ್ಲಿ ಭಗವತಿ ಆರಾಧನೆಯು ನ್ಯಾಯಪ್ರಮಾಣ ಪದ್ಧತಿಯಾಗಿ, ಚಿಕಿತ್ಸಕ ಶಕ್ತಿಯಾಗಿ, ಮನೋರಂಜನಾ ಮಾಧ್ಯಮವಾಗಿರುವುದೂ ಗಮನಾರ್ಹ. ಕೇರಳ ಸಂಸ್ಕೃತಿಯಿಂದ ಪ್ರಭಾವಿತ ಕೊಡಗು ಪರಿಸರವೂ ಭಗವತಿಯನ್ನು ಸ್ತ್ರೀ ಪರಾಕ್ರಮದ ದ್ಯೋತಕವೆಂದು ಪರಿಗಣಿಸಿ ಆಕೆಗೆ ಸ್ಥಳೀಯ ಚರಿತ್ರೆಯನ್ನೂ, ವ್ಯಕ್ತಿತ್ವವನ್ನೂ ಮತ್ತು ಆರಾಧನಾ ವಿಧಾನಗಳನ್ನು ಗೊತ್ತು ಪಡಿಸಿದ್ದಾರೆ. ಭಗವತಿ ಆರಾಧಕ ವರ್ಗಗಳು ತಮ್ಮ ಕುಲವೃತ್ತಿಯ ಪೋಷಕ ಶಕ್ತಿಯಾಗಿ ಭಗವತಿಯನ್ನು ಸ್ವೀಕರಿಸಿ, ಕೌಟುಂಬಿಕ ಕಾರ್ಯಗಳು, ಮತ್ತು ಸಾಮಾಜಿಕ ಬದುಕನ್ನು ಆರಾಧನೆಯಿಂದ ಪ್ರೇರಿತವನ್ನಾಗಿಸಿದ್ದಾರೆ. ಆಚಾರ ಕ್ರಮ ಮತ್ತು ಶುದ್ಧಿಯ ಪರಿಕಲ್ಪನೆಯನ್ನು ಒಪ್ಪಿಕೊಂಡ ಭಗವತಿಗೆ ನಡೆದುಕೊಳ್ಳುವ

ಪಾತ್ರಿವರ್ಗವು ಆಕೆಯ ಅಲೌಕಿಕ ಕಲ್ಪನೆಗೆ ವಾಸ್ತವ ರೂಪನೀಡುವವರು. ಮಾಧ್ಯಮಿಕ ಜಗತ್ತಿನಲ್ಲಿ ಭಗವತಿಯ ಅಸ್ತಿತ್ವ ಮತ್ತು ನಂಬಿಕೆಗಳು ದೃಢವಾಗುವುದಕ್ಕೆ ಇವರ ಪಾತ್ರ ಮಹತ್ವದ್ದಾಗಿದೆ.

ಭಗವತಿ ಆರಾಧನೆ ಒಂದು ಕಾಲದ ಸತ್ಯ. ಆ ಸತ್ಯ ಆ ಕಾಲದಿಂದಲೇ ಪ್ರಭಾವಿತ ಮತ್ತು ನಿರ್ದೇಶಿತ. ಅದು ಆಧುನಿಕ ಕಾಲದ ಸತ್ಯವಾಗಿ, ತಲೆಮಾರುಗಳನ್ನು ದಾಟಿ ಬರುವಾಗ ಕಾಲೋಚಿತ ಪರಿಣಾಮಗಳಿಂದ ಪೂರ್ಣವಾಗಿಯೋ, ಆಂಶಿಕವಾಗಿಯೋ ಬದಲಾಗುತ್ತದೆ. ವೈದಿಕತೆ ಮತ್ತು ಆಧುನಿಕತೆ ಈ ನಿಟ್ಟಿನಲ್ಲಿ ಬದಲಾವಣೆಗೆ ಮುಖ್ಯ ಕಾರಣಗಳು. ಆದ್ದರಿಂದಲೇ ಭಗವತಿ ಆರಾಧನೆಯು ಸಂಸ್ಕೃತಿವಾಹಕ ಆಚರಣೆಯಾಗಿದೆ. ಅದು ಗತದಿಂದ ವಾಸ್ತವಕ್ಕೆ ಮಾತ್ರವಲ್ಲ, ಒಂದೇ ಕಾಲದಲ್ಲಿ ಬೇರೆ ಬೇರೆಡೆ ಸಂಸ್ಕೃತಿಯನ್ನು ಪಸರಿಸುತ್ತದೆ. ನಂಬಿಕೆ–ವಿಶ್ವಾಸಗಳು ಸಡಿಲವಾಗುವಾಗ ಅದನ್ನು ದೃಢಗೊಳಿಸುತ್ತದೆ. ಕುಸಿಯುತ್ತಿರುವ ಮಾನವೀಯ ಮೌಲ್ಯಗಳಿಗೆ ಪುನಶ್ಚೇತನ ನೀಡುತ್ತದೆ. ಇದು ಆರಾಧಕ ಸಮುದಾಯದ ಒಗ್ಗಟ್ಟು ಮತ್ತು ಪ್ರಯೋಗಶೀಲತೆಗೆ ಕಾರಣವಾಗಿದೆ. ಸಮುದಾಯಗಳು ತಮ್ಮದೇ ಆದ ಸಾಂಸ್ಕೃತಿಕ ಚರಿತ್ರೆಯನ್ನು ರೂಪೀಕರಿಸಲು ಎಡೆಮಾಡಿಕೊಟ್ಟಿದೆ. ಭಗವತಿಯು ಕಾಳಿ, ಸಮರದೇವತೆ, ರಕ್ತಾಹಾರ ಸ್ವೀಕರಿಸುವವಳೆಂಬ ಕಲ್ಪನೆಯಿಂದುಂಟಾದ ಭಯ ಹಾಗೆಯೇ, ಮಾತೃದೇವತೆ, ಭಕ್ತಪಾಲಿನಿ, ಸಮೃದ್ಧಿಯ ದೇವಿ ಎಂಬ ಕಲ್ಪನೆಯಿಂದಂಟಾಗುವ ಭಕ್ತಿ, ಒಲವುಗಳು ಸಮಾಜದ ಸನ್ನಡತೆಗೆ ಕಾರಣ. ಮನೋವೈಜ್ಞಾನಿಕವಾಗಿ ವ್ಯಕ್ತಿ ಅಥವಾ ಸಮಾಜದ ಪರಿವರ್ತನೆಗೆ ಇದು ಅನುಕೂಲವಾಗುತ್ತದೆ. ಒಂದು ಆರಾಧನಾ ಪದ್ಧತಿ ನಾಶವಾದರೆ ಅದಕ್ಕೆ ಪೂರಕವಾದ ಹಾಗೂ ಪ್ರೇರಕವಾದ ಸಂಸ್ಕೃತಿಯೇ ನಾಶವಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಅಧ್ಯಯನದ ತಾತ್ವಿಕತೆ

ಭಗವತಿ ಆರಾಧನೆಯು ಒಂದು ವಾಸ್ತವಿಕ ರಂಗಭೂಮಿ ಅಲ್ಲ. ಅದೊಂದು ಭ್ರಾಮಕ ಜಗತ್ತು. ಒಂದಾನೊಂದು ಕಾಲದಲ್ಲಿ ಇದ್ದಳು ಎನ್ನಲಾಗುವ ಭಗವತಿಯನ್ನು ಒಂದಾನೊಂದು ಕಾಲದಲ್ಲಿ ನಡೆದಿತ್ತು ಎನ್ನಲಾಗುವ ಐತಿಹ್ಯದ ಘಟನೆಯ ಮೂಲಕ ಇಲ್ಲಿ ಸಮರ್ಥಿಸಿಕೊಳ್ಳಲಾಗುತ್ತದೆ. ಈ ಆರಾಧನೆಯ ಸಂದರ್ಭವು ಅಲೌಕಿಕವಾದ ಭಗವತಿಯ ವ್ಯಕ್ತಿತ್ವವನ್ನು ಲೌಕಿಕ ಜಗತ್ತಿನಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡುತ್ತದೆ. ಕಲ್ಪನೆಗಳ ಶಕ್ತಿಯಿಲ್ಲದಿದ್ದರೆ ಈ ಆರಾಧನೆಗೆ ಅರ್ಥವೇ ಇರುವುದಿಲ್ಲ. ಪರಿಕರಗಳು, ಪಠ್ಯಗಳು ಇಂತಹ ಕಲ್ಪನೆಗಳನ್ನು ಸುಂದರಗೊಳಿಸುತ್ತವೆ. ಮತ್ತು ಸಾಕ್ಷೀಕರಿಸುತ್ತವೆ. ಆರಾಧನೆಯ ಸಂದರ್ಭದಲ್ಲಿ ಎಲ್ಲವೂ ಸಂಕೇತಿಕ (Symbolic) ರೂಪದಲ್ಲಿರುತ್ತವೆ. ಭಗವತಿಯ ಕಥನದಲ್ಲಿ ನಡೆದ ಘಟನೆಯನ್ನು ಮರುರೂಪಿಸುವ ಸಂದರ್ಭದಲ್ಲಿ ಈ ಸಂಕೇತಗಳು ಪರ್ಯಾಯ ಸಾಧನಗಳಾಗುತ್ತವೆ.

ಭಗವತಿಯು ಜನರೆದುರು ಬಣ್ಣ, ವೇಷಭೂಷಣಗಳನ್ನೊಳಗೊಂಡು ಸಾಮಾನ್ಯರಿಗಿಂತ ಎತ್ತರವೂ ಅಗಲವೂ ಆದ 'ತೆಯ್ಯಂ' ಸ್ವರೂಪದಲ್ಲಿ ಪ್ರಕಟಗೊಳ್ಳುತ್ತಾಳೆ. ತಮಗಿಂತ ಎತ್ತರ–ಅಗಲ ಎಂಬುದು ಕಲ್ಪನೆಯ ಶಕ್ತಿಗೆ ಜನಪದ ಮನಸ್ಸು ಕೊಟ್ಟ ವಿರಾಡ್ರೂಪಕ್ಕೆ ಸಾಕ್ಷಿ. ತಮಗಿಂತ ಮಿಗಿಲಾದದ್ದು ಎನ್ನುವುದನ್ನು ಆಕಾರ–ಪಾತ್ರಗಳಲ್ಲೂ ಪ್ರತಿಬಿಂಬಿಸುವ ಪ್ರಯತ್ನವಿದು.

ಜಾನಪದರ ಪ್ರಕಾರ ಅಲೌಕಿಕ ಜಗತ್ತಿನಲ್ಲಿ ವಾಸಿಸುವ ಭಗವತಿಯು ವ್ಯಕ್ತಿ ಮಾಧ್ಯಮದ ಮೇಲೆ ಕಾಣಿಸಿಕೊಳ್ಳುವಾಗ ಕೆಲವು ವಿಧಿ ನಿಷೇಧಗಳಿವೆ. ಎಲ್ಲೆಂದರಲ್ಲಿ, ಯಾರ ಮೇಲೂ ಆಕೆ ಮೈದಳೆಯುವುದಿಲ್ಲ. ನಿರ್ದಿಷ್ಟ ಕಾಲ, ಸ್ಥಳ, ವ್ಯಕ್ತಿ ಇಲ್ಲಿ ಮುಖ್ಯವಾಗುತ್ತದೆ. ಅಗೋಚರ ಶಕ್ತಿಗಳಿಗೆ ಪೂರಕವಾಗುವಂತೆ ನಿಗೂಢತೆಗೆ ಅನುಕೂಲವಾಗುವ ರಾತ್ರಿಕಾಲದಲ್ಲಿಯೇ ಹೆಚ್ಚಾಗಿ ಭಗವತಿ ಪ್ರಕಟಗೊಳ್ಳುತ್ತಾಳೆ. ಸಾಮಾನ್ಯವಾಗಿ ಮಳೆಗಾಲ ಮುಗಿದು ಬೆಳೆ ಫಸಲಿನ ಸಮೃದ್ಧಿಯ ಕಾಲದಲ್ಲೇ ಭಗವತಿ ಉತ್ಸವ ಪ್ರಾರಂಭವಾಗುತ್ತದೆ. ಬೇಸಿಗೆಯ ಸಮಯದಲ್ಲಿ ಜನರಲ್ಲಿ

ಬಿಸಿಲ ಆಹಾಕಾರ, ಅನಾವೃಷ್ಟಿ, ಬರ ಮೊದಲಾದವು ತಲೆದೋರುವ ಸಂದರ್ಭದಲ್ಲಿಯೇ ಭಗವತಿಯನ್ನು ಉತ್ಸವ ಮುಖೇನ ಪೂಜಿಸುವ ಹಿನ್ನೆಲೆಯಲ್ಲಿ ಹೊಸ ಸಮೃದ್ಧಿಯನ್ನು ಅಪೇಕ್ಷಿಸುವ ಉದ್ದೇಶವಿರುತ್ತದೆ. ಮಳೆಗಾಲ ಮತ್ತೆ ಆರಂಭವಾಗುವಾಗ ಆರಾಧನೆಯಲ್ಲಿ ತೊಡಗಿಕೊಂಡಿದ್ದ ಜನತೆ ಮತ್ತೆ ಜೀವನೋಪಾಯವಾದ ಕೃಷಿ ಚಟುವಟಿಕೆಯತ್ತ ಮುಖಮಾಡುತ್ತಾರೆ. ವೃತ್ತಿ ಜೀವನಕ್ಕೆ ಅಡ್ಡಿಯಾಗದಂತೆ ಆರಾಧನೆ ಮತ್ತು ಆಚರಣೆಗಳನ್ನು ಜನಪದರು ರೂಢಿಸಿಕೊಂಡಿದ್ದಾರೆ.

ಭಗವತಿ ಆರಾಧನೆಯಲ್ಲಿ ಮಾಧ್ಯಮವಾಗಿರುವ ವ್ಯಕ್ತಿಯನ್ನು ಸ್ನಾನ, ಶುದ್ಧಿ, ಆಹಾರ, ಅಲಂಕಾರಗಳ ಕಾರಣಗಳಿಂದ ಉಳಿದವರಿಂದ ಪ್ರತ್ಯೇಕಿಸುತ್ತಾರೆ. ಚಪ್ಪರ, ಶುದ್ಧಿ, ಶೃಂಗಾರ, ಬೆಳಕು ಮುಂತಾದವುಗಳಿಂದ ಸ್ಥಳವನ್ನೂ ವಿಶೇಷವನ್ನಾಗಿಸುತ್ತಾರೆ. ಹೀಗೆ ವ್ಯಕ್ತಿ, ಕಾಲ, ಸ್ಥಳ ಮೂರರಲ್ಲೂ ನಿರ್ದಿಷ್ಟತೆ ಉಂಟುಮಾಡಿದಾಗ ಮಾತ್ರ ದೈವ ಲೌಕಿಕ ಜಗತ್ತಿಗೆ ಬರುತ್ತದೆ ಎಂದು ನಂಬಲಾಗುತ್ತದೆ. ಇಂತಹ ವಾತಾವರಣ ಆರಾಧನೆಯ ಪ್ರಕ್ರಿಯೆಗಳಿಗೆ ಪೂರಕವಾಗಿರುತ್ತದೆ.

ಭಗವತಿ ಸೇರಿದಂತೆ ಎಲ್ಲಾ ಶಕ್ತಿಯಾರಾಧನೆಯು ಜಲ ಮತ್ತು ಅಗ್ನಿ ತತ್ವಗಳಿಗೆ ಬದ್ಧವಾಗಿರುತ್ತದೆ. ನೀರು ಫಲವಂತಿಕೆಯ ಧಾತು. ಸ್ತ್ರೀ ಶಕ್ತಿಗಳ ಆರಾಧನೆಯೂ ಇದೇ ಫಲಸಮೃದ್ಧಿಯ ಆಶಯವುಳ್ಳದ್ದು ನೀರನ್ನು ಭಗವತಿ ಆರಾಧನೆಯಲ್ಲಿ ಸ್ಥಳ, ವ್ಯಕ್ತಿ, ಪರಿಕರಗಳ ಶುದ್ಧಿಗಾಗಿ, ಆವಾಹಿಸಿದ ಭಗವತಿಯ ಶಕ್ತಿಯನ್ನು ವ್ಯಕ್ತಿಯಿಂದ ಬೇರ್ಪಡಿಸುವುದಕ್ಕಾಗಿ, ಪರಿಕರಗಳಿಗೆ ಚೈತನ್ಯಸತ್ವವನ್ನು ತುಂಬುವುದಕ್ಕಾಗಿ, ರೋಗಶಮನದ ಔಷಧಿಯಾಗಿ, ಬಳಸುತ್ತಾರೆ. ಶುದ್ಧಿಯ ಕಾರಣದಲ್ಲಿ ನೈರ್ಮಲ್ಯದ ಮುಖೇನ ಒಳಿತನ್ನು ಪಡೆಯುವ ತಾತ್ವಿಕತೆಯಿದೆ. ಸಮಸ್ಯೆ ಅಥವಾ ಕಾಯಿಲೆಗಳ ಉಪಶಮನಕಾರಿಯಾಗಿ ನೀರು ಬಳಕೆಯಾಗುವುದು ಒಟ್ಟು ಭಗವತಿ ಆರಾಧನೆಯ ಆಶಯಕ್ಕೆ ಪೂರಕವಾಗಿದೆ.

ಭಗವತಿ ಆರಾಧನೆ ಒಂದು ದ್ರಾವಿಡ ಉಪಾಸನಾ ಪ್ರಕಾರ. ದ್ರಾವಿಡರಲ್ಲಿ ದೀಪಕ್ಕಿಂತಲೂ ಧೂಪಕ್ಕೆ ಆದ್ಯತೆ. ಹಾಗಾಗಿಯೇ ಧೂಪ ಸತ್ಕಾರ ಶುದ್ಧಿಯ ಕಾರ್ಯದಲ್ಲಿ ಮುಖ್ಯವಾಗುತ್ತದೆ. ಆರತಿ, ದೀಪಾರಾಧನೆಗಳು ಆರ್ಯ ಪ್ರಭಾವದಿಂದ ರೂಢಿಗೊಂಡಿದೆ. ದ್ರಾವಿಡ ಹಿನ್ನೆಲೆಯ ಭಗವತಿ ಆರಾಧನೆಯಲ್ಲಿ 'ಅಗ್ನಿ' ಪೂಜನೀಯವೆಂದೆನಿಸದು. ಆರ್ಯರಲ್ಲಿ ಅಗ್ನಿಯನ್ನು ದೀಪ, ಹೋಮ, ಆರತಿ ರೂಪಗಳಲ್ಲಿ ಪೂಜಿಸಿದರೆ, ದ್ರಾವಿಡರ ಭಗವತಿ ಆರಾಧನೆಯಲ್ಲಿ ಅಗ್ನಿಯನ್ನು ಕೆಂಡಸೇವೆಯ ವಿಧಿಯಲ್ಲಿ ತುಳಿದಾಡುತ್ತಾರೆಂಬುದನ್ನು ಗಮನಿಸಬೇಕು.

ಇದಲ್ಲದೆ, ಭಗವತಿಯ ವ್ಯಕ್ತಿ ಮಾಧ್ಯಮದ ಮೇಲೆ ಆವೇಶಗೊಳ್ಳುವುದನ್ನು 'ವೆಳಿ' ಅಂದರೆ, 'ಬೆಳಕು' ಎನ್ನುವ ಹೆಸರಿನಲ್ಲೇ ಕರೆಯಲಾಗುತ್ತದೆ. ಇದು ಶಕ್ತಿಯನ್ನು ಅಗ್ನಿಯ ಪ್ರಭಾರೂಪದಲ್ಲಿ ಪರಿಕಲ್ಪಿಸಿರುವ ಬಗೆಯಾಗಿದೆ. ದೊಂದಿ(ಬೆಂಕಿಯ ಪಂಜು)ಯನ್ನು ಸೊಂಟಕ್ಕೆ ಕಟ್ಟಿಕೊಳ್ಳುವುದು, ಪಾತ್ರಿಗಳು ಕೆಂಡದ ಮೇಲೆ ಹಾಯುವುದು, ಕೈಗಳಲ್ಲಿ ದೀಪಗಳನ್ನು ಹಿಡಿದುಕೊಂಡು 'ತಾಲಪ್ಪೊಲಿ' (ಆರತಿಬಲಿ) ಆಡುವುದು, ಆಲಯದ ಸುತ್ತಲೂ ದೀಪ ಬೆಳಗುವುದು ಹೀಗೆ ಅಗ್ನಿಯ ಬಳಕೆ ಭಗವತಿ ಆರಾಧನೆಯಲ್ಲಿ ಬಹುವಿಧದಲ್ಲಿವೆ. ಭಗವತಿಯ ಕಾರಣಿಕತೆಗಳನ್ನು ಪ್ರದರ್ಶಿಸಲು ಅಗ್ನಿ ಬಹು ಮುಖ್ಯ ಮಾಧ್ಯಮ.

ನೀರು ಎಂಬುದು ಸೃಷ್ಟಿಗೆ, ಬೆಂಕಿ ಎಂಬುದು ನಾಶಕ್ಕೆ ಮೂಲವಾಗಿ ಭಗವತಿ ಆರಾಧನೆಯಲ್ಲಿ ಬಳಕೆಯಾಗುತ್ತದೆ. ಶಿವನ ಕಣ್ಣೀರು ಅಥವಾ ಕಣ್ಣಿನ ಜ್ವಾಲೆಯಿಂದ ಭಗವತಿ ಹುಟ್ಟಿದಳೆಂಬ ಜನಜನಿತ ಕಥನವೂ ಜಲತತ್ವ ಮತ್ತು ಅಗ್ನಿತತ್ವಗಳೆರಡನ್ನೂ ಎತ್ತಿಹಿಡಿದಿರುವುದನ್ನು ಲಕ್ಷ್ಯಿಸಬೇಕು.

ಭಗವತಿ ಆರಾಧನೆಯ ಒಂದು ನೆಲಪರ, ಕೃಷಿಪರ, ಮನುಷ್ಯಪರ ಆರಾಧನಾ ವಿಧಾನ. ಭೂಮಿ, ಫಲ, ನೀರು, ಶಕ್ತಿ, ಸಮೃದ್ಧಿ, ಜೀವ ಮುಂತಾದುವುಗಳನ್ನು ಹೆಣ್ಣೊಬ್ಬಳ ರೂಪಕೊಟ್ಟು ಆರಾಧಿಸುವ ಈ ವಿಧಾನದಲ್ಲಿ ಪ್ರತಿಯೊಬ್ಬರೂ ರೋಗರಹಿತ, ಬಾಧೆರಹಿತ, ದುಃಖರಹಿತರಾಗಿ ಬದುಕಬೇಕೆಂಬ ತಾತ್ವಿಕತೆ ಅಡಗಿದೆ. ಆರಾಧನೆ ಕಲಾತ್ಮಕವಾಗಿ ಕಂಡುಬಂದರೂ ಮನುಷ್ಯ ಜೀವನ ಮತ್ತು ಪ್ರಕೃತಿಯನ್ನು ಜೋಪಾನವಾಗಿ ರಕ್ಷಿಸುವುದು, ಪೋಷಿಸುವುದು, ಹೆಚ್ಚಿಚ್ಚು ಫಲಭರಿತವನ್ನಾಗಿಸುವುದನ್ನೇ ಉದ್ದೇಶವನ್ನಾಗಿಟ್ಟುಕೊಂಡಿದೆ.

ಅಧ್ಯಯನದ ಫಲಿತಗಳು

ಭಗವತಿ ಆರಾಧನೆ ಎಂಬ ಶಕ್ತಿಯಾರಾಧನೆಯ ಪ್ರಕಾರವನ್ನು ಸಾಂಸ್ಕೃತಿಕ ನೆಲೆಯಲ್ಲಿ ವಿಶ್ಲೇಷಿಸುವುದು ಈ ಅಧ್ಯಯನದ ಮೂಲ ಉದ್ದೇಶ. ಆರಾಧನೆಯ ಮುಖೇನ ಸಂಸ್ಕೃತಿಯೊಂದು ಜನಸಮುದಾಯಗಳ ಮಧ್ಯ ಭದ್ರಗೊಳ್ಳುವ, ಸ್ಥಿತ್ಯಂತರಕ್ಕೊಳಗಾಗುವ, ಪ್ರಭಾವ ಬೀರುವ ಅಂಶಗಳನ್ನು ಇಲ್ಲಿ ಭಗವತಿ ಎಂಬ ಶಕ್ತಿದೇವತೆಯ ಉಪಾಸನಾ ವಿಧಾನಗಳನ್ನಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಹಾಗಾಗಿ ಇದೊಂದು ಹೊಸ ಅಧ್ಯಯನ ಸಾಧ್ಯತೆ.

ಶಕ್ತಿಯಾರಾಧನೆಯ ಬೇರೆ ಬೇರೆ ಪ್ರಕಾರಗಳ ಪೈಕಿ ಭಗವತಿ ಆರಾಧನೆಯು ವಿಶೇಷವೆಂದೆನಿಸುವುದಕ್ಕೆ ಕಾರಣಗಳನ್ನು ಈ ಅಧ್ಯಯನವು ಶೋಧಿಸುತ್ತದೆ. ವೈದಿಕ ಮತ್ತು ಜಾನಪದ ಆಕರಗಳನ್ನು ಬಳಸಿಕೊಂಡು ಇಂತಹ ವಿಶೇಷತೆಯನ್ನು ಸಮರ್ಥಿಸಲಾಗಿದೆ. ಅದರ ವೈಜ್ಞಾನಿಕ ಹಿನ್ನೆಲೆಗಳನ್ನು ಶೋಧಿಸಲಾಗಿದೆ. ಅಧ್ಯಯನದ ವ್ಯಾಪ್ತಿಯನ್ನು ಉತ್ತರ ಕೇರಳ ಮತ್ತು ದಕ್ಷಿಣ ತುಳುನಾಡಿಗೆ ಸೀಮಿತಗೊಳಿಸಿ, ಅಧ್ಯಯನದ ಉದ್ದೇಶ ಮತ್ತು ವಿಧಾನಗಳನ್ನು ವಿವೇಚಿಸಲಾಗಿದೆ. ಶಕ್ತಿಯಾರಾಧನೆ ಮತ್ತು ಮಾತೃದೇವತಾರಾಧನೆ ಬೆಳೆದುಕೊಂಡು ಬಂದ ಬಗೆಯನ್ನು ಅವಲೋಕಿಸಿ, ಅವುಗಳಲ್ಲಿ ಭಗವತಿ ಆರಾಧನೆಯು ಮುಖ್ಯವಾಗುವುದಕ್ಕೆ ಕಾರಣಗಳನ್ನು ಹೇಳಲಾಗಿದೆ. ಭಗವತಿ ಆರಾಧನೆ ಎಂಬುದು ಒಂದು ಪ್ರಮುಖ ಶಕ್ತಿಯಾರಾಧನೆಯ ಪ್ರಕಾರ. ಮಾತೃ ದೇವತಾರಾಧನೆಯ ಪ್ರಾಚೀನತೆ ಈ ಆರಾಧನೆಗೂ ಸಲ್ಲುತ್ತದೆ. ಭಗವತಿ ಹೆಸರಿಗೂ ಆರಾಧನೆಯ ಸ್ವರೂಪಕ್ಕೂ ತುಲನೆಯಿದೆ. ಕೇರಳ ತೆಯ್ಯಂ ಆರಾಧನೆಯಲ್ಲಿ ಭಗವತಿಗೆ ಪ್ರಧಾನ ಸ್ಥಾನವಿದೆ. ಜೈನ ಬೌದ್ಧರಲ್ಲೂ ಇದೇ ಭಗವತಿ ಭಿನ್ನ ಬಗೆಯಲ್ಲಿ ಆರಾಧನೆ ಪಡೆಯುತ್ತಾಳೆ. ಅವರಲ್ಲೂ ಆಕೆ ರಕ್ಷಣೆಗೆಂದೇ ಇರುವ ಶಕ್ತಿದೇವತೆ. ಭಗವತಿಯ ಆರಾಧನಾ ಕೇಂದ್ರಗಳು ಆರಾಧನೆಯ ಗತ ಸ್ವರೂಪವನ್ನು ಸ್ಪಷ್ಟಪಡಿಸುತ್ತವೆ. ಅವು ಜನಪದರ ವೈವಿಧ್ಯಪೂರ್ಣ ಶಕ್ತಿ ಕಲ್ಪನೆಗೆ ಸಾಕ್ಷಿ. ಭಗವತಿಗೆ ಪುರಾಣ ಹಿನ್ನೆಲೆಗಿಂತಲೂ ಮಾನವ್ಯ ಹಿನ್ನೆಲೆಯೇ ಹೆಚ್ಚು. ಜನಪದ ಬಗೆಯಲ್ಲೂ ವೈದಿಕ ವಿಧಾನದಲ್ಲೂ ಭಗವತಿಯನ್ನು ಆರಾಧಿಸುತ್ತಾರೆ.

ಮಧ್ಯ ಮತ್ತು ದಕ್ಷಿಣ ಕೇರಳದಲ್ಲಿ ಭಗವತಿಯು ವೈದಿಕ ವಿಧಾನದಲ್ಲೇ ಹೆಚ್ಚಾಗಿ ಆರಾಧಿಸಲ್ಪಟ್ಟರೆ, ಉತ್ತರ ಕೇರಳ ಮತ್ತು ದಕ್ಷಿಣ ಕರ್ನಾಟಕ ಕರಾವಳಿ ಭಾಗದಲ್ಲಿ ಸಮುದಾಯ ಬದ್ಧವಾಗಿ ಭಗವತಿ ಆರಾಧನೆಯು ನಡೆಯುವುದರಿಂದಲೇ ಅದರಲ್ಲಿ ವೈವಿಧ್ಯತೆಯನ್ನು ಗುರುತಿಸಬಹುದು. ಈ ಭಾಗಗಳಲ್ಲಿ ಭಗವತಿ ಉತ್ಸವಗಳು ಹೆಚ್ಚಿಚ್ಚು ಚಲನಶೀಲವೂ, ಕ್ರಿಯಾಶೀಲವೂ ಆಗಿರುವುದಲ್ಲದೆ, ಇವುಗಳಲ್ಲಿ ಪ್ರಯೋಗಾತ್ಮಕತೆಯನ್ನೂ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಹಲವು ಜನಪದ ಕಥನ, ದೃಷ್ಟಾಂತ ಸ್ಥಳ ಚರಿತ್ರೆ, ಕಾಲ್ಪನಿಕತೆ, ಮೌಖಿಕ ಪರಂಪರೆಗಳೊಂದಿಗೆ ಇದು ಅನುಸಂಧಾನವನ್ನು ಇಟ್ಟುಕೊಂಡಿರುತ್ತದೆ. ಹಾಗಾಗಿ ಆರಾಧನೆ ಎಂಬುದಕ್ಕೆ ಇಲ್ಲಿ ಸಿದ್ಧಮಾದರಿಯಿಲ್ಲ.

ಭಗವತಿ ಆರಾಧನೆಯ ಚಾರಿತ್ರಿಕತೆಯನ್ನು ಗುರುತಿಸುವಾಗ ತಮಿಳು ಸಂಗಂ ಸಾಹಿತ್ಯದಲ್ಲೇ ತೆಯ್ಯಂ ಸಂಪ್ರದಾಯದ ಮೂಲ ಸ್ವರೂಪ ರೂಢಿಯಲ್ಲಿತ್ತು ಎಂಬ ಅಂಶವನ್ನು ಈ ಅಧ್ಯಯನ ಎತ್ತಿಹಿಡಿದೆ. ತಮಿಳಿನ ಆದಿಕಾವ್ಯ 'ಶಿಲಪ್ಪದಿಕಾರಂ'ನ ನಾಯಕಿಯಾಗಿರುವ ಕಣ್ಣಗಿಯು ಭಗವತಿಯ ಪ್ರಾಚೀನವಾದ ಲೌಕಿಕ ಸ್ವರೂಪವಾಗಿದ್ದಾಳೆ.

ಕಣ್ಣಗಿಯ ಈ ಕತೆಯೇ ಭಗವತಿಯ ಆದಿಕ್ಷೇತ್ರವಾದ ಕೊಡಂಗಲ್ಲೂರಿನ ಸ್ಥಳ ಪುರಾಣದ ಜೊತೆ ಹೊಂದಿಕೆಯಾಗುತ್ತದೆ. ಪಣಂಬೂರು, ಅಮ್ಮುಂಜೆ ಶಾಸನಗಳಲ್ಲಿ, ೧೦ನೇ ಶತಮಾನದ ಪಂಪನ ಕಾವ್ಯದಲ್ಲಿ, ಅಬ್ಬಕ್ಕಳನ್ನು ಕುರಿತಾದ ಅಡ್ಕದ ಐತಿಹ್ಯದಲ್ಲಿ, ಮಂಜೇಶ್ವರ ದೇಗುಲದ ಸ್ಥಳಚರಿತ್ರೆಯಲ್ಲಿ ಉಲ್ಲೇಖವಾಗಿರುವ ಅಂಶಗಳ ಮುಖೇನ ಭಗವತಿ ಆರಾಧನೆಯ ಪ್ರಾಚೀನ ಉಲ್ಲೇಖ ಮತ್ತು ಚಾರಿತ್ರಿಕತೆಯನ್ನು ದಾಖಲೆ ಸಹಿತ ನಿರ್ಣಯಿಸಲಾಗಿದೆ. ಇದರಿಂದಾಗಿ ಭಗವತಿ ಆರಾಧನೆಯು ಒಂದು ಸ್ವತಂತ್ರ ಶಕ್ತಿಯುಪಾಸನಾ ಪ್ರಕಾರ ಬೇಕಾದ ಪ್ರಕಾರದಿಂದಲೂ ರೂಪಾಸರವಾದದ್ದಲ್ಲ ಎಂದು ವಿಶದಪಡಿಸಲಾಗಿದೆ.

ಭಗವತಿ ಎಂಬ ಹೆಸರಿನ ಅರ್ಥ ಸಾಧ್ಯತೆಯನ್ನು ಕಂಡು ಕೊಳ್ಳುವಾಗ ಆಕೆ ಸಮರದೇವತೆ ಮತ್ತು ಸಮೃದ್ಧಿ ದೇವತೆ ಎಂಬ ಎರಡೂ ಅರ್ಥಗಳಲ್ಲಿ ಪರಿಕಲ್ಪಿತಳಾಗಿರುವುದು ಕಂಡುಬರುತ್ತದೆ. ಪೌರಾಣಿಕ ನೆಲೆಯಲ್ಲಿ ದಾರುಕಾಸುರನನ್ನು ಸಂಹಾರ ಮಾಡಿದ ದೇವಿಯಾಗಿ, ಜೈನ–ಬೌದ್ಧ ಪರಂಪರೆಯಲ್ಲಿ ಯಕ್ಷಿಯಾಗಿ ಭಗವತಿಯ ಸ್ವರೂಪವನ್ನು ಚರ್ಚಿಸಲಾಗಿದೆ. ಭಗವತಿಯು ಶಕ್ತಿದೇವತೆಯಲ್ಲಿ ಒಬ್ಬಳಾದರೂ ಅವಳಲ್ಲೂ ಮತ್ತೆ ನಾಲ್ಕುನೂರಕ್ಕಿಂತಲೂ ಹೆಚ್ಚು ಪ್ರಭೇದಗಳಿವೆ. ಆರಾಧನೆಯ ನೆಲೆಯಲ್ಲಿ, ಕಥನದ ಹಿನ್ನೆಲೆಯಲ್ಲಿ, ಗುಣ–ಉದ್ದೇಶಗಳ ನೆಲೆಯಲ್ಲಿ ವರ್ಗೀಕರಣ ಸಾಧ್ಯವಿದೆ ಎಂಬುದನ್ನು ಈ ಅಧ್ಯಯನ ತೋರಿಸಿಕೊಟ್ಟಿದೆ. ಕನ್ನಡ ಸಂಶೋಧನಾ ಇತಿಹಾಸದಲ್ಲಿ ಭಗವತಿಯ ಇಷ್ಟೊಂದು ಸಂಖ್ಯೆಗಳ ಹೆಸರಿನ ಪಟ್ಟಿ ಈ ಹಿಂದೆ ಕ್ರೋಢೀಕರಣಗೊಂಡದ್ದಿಲ್ಲ ಎಂಬುದನ್ನು ಗಮನಿಸಬೇಕು.

ಈ ಅಧ್ಯಯನವು ಆರಾಧನೆಯ ಸಾಂಸ್ಕೃತಿಕ ಸ್ವರೂಪವನ್ನು ವಿಶ್ಲೇಷಿಸುವುದರಿಂದ ಭಗವತಿ ಆರಾಧನೆಯ ವಿವಿಧ ಪ್ರಬೇಧಗಳನ್ನು ಪ್ರತ್ಯೇಕ–ಪ್ರತ್ಯೇಕವಾಗಿ ವಿವರಿಸಿ ಅವುಗಳ ನಡುವಿನ ಕಾರ್ಯಕಾರಣ ಸಂಬಂಧವನ್ನು ಶೋಧಿಸಲಾಗಿದೆ. ಉತ್ಸವವನ್ನು ಪಾತ್ರಿ ಪ್ರಧಾನ ಮತ್ತು ತೆಯ್ಯಂ ಪ್ರಧಾನಗಳೆಂಬ ಎರಡು ವಿಧಿಪ್ರಕಾರಗಳಾಗಿ ವಿಂಗಡಿಸಿ, ಮಾಹಿತಿ ಕಲೆಹಾಕಿ, ವಿಶ್ಲೇಷಣೆ ಮಾಡಲಾಗಿದೆ. ಪ್ರತಿ ಪ್ರಭೇಧವೂ ಆಯಾ ಭಗವತಿಯ ಚರಿತ್ರೆ–ಹಿನ್ನೆಲೆಗಳನ್ನು ಜನರೆದುರು ಕಲಾತ್ಮಕವಾಗಿ ಮರುಸೃಷ್ಟಿಸುವ ಧಾರ್ಮಿಕ ರಂಗಭೂಮಿಯಾಗಿದೆ. ಈ ಮುಖೇನ ಆರಾಧನೆಯ ಪ್ರಕಾರಗಳು ಸಮುದಾಯ ಮತ್ತು ಸಮಾಜಗಳಿಗೆ ಮೂಲ ಸಂಸ್ಕೃತಿಯವಾಹಕಗಳಾಗಿವೆ ಎಂಬುದನ್ನು ಸಮರ್ಥಿಸಿಕೊಳ್ಳಲಾಗಿದೆ. ಆರಾಧನಾ ಪ್ರಕ್ರಿಯೆಗಳೆಲ್ಲವೂ ಜೀವಮುಖಿ ಮತ್ತು ಜೀವನಮುಖಿಗಳಾಗಿವೆ. ಆರಾಧಕ ವರ್ಗದ ಇಡೀ ವರ್ಷದ ನಿವೇದನೆ, ಸಂಕಷ್ಟ, ಅಭಿಲಾಷೆ ಸಹಿತವಾದ ಮಾನಸಿಕ ಸಿತ್ಯಂತರಗಳು ಭಗವತಿ ಆರಾಧನೆಯ ವಿವಿಧ ಪ್ರಕಾರ ಮತ್ತು ಅವುಗಳನ್ನು ಸಹಿಸುವ ವಿಧಿವಿಧಾನಗಳಲ್ಲಿ ವ್ಯಕ್ತಗೊಳ್ಳುತ್ತವೆ ಮತ್ತು ತೃಪ್ತಗೊಳ್ಳುತ್ತವೆ.

ಆರಾಧನೆಯನ್ನು ಆಕರ್ಷಕ ಮತ್ತು ಪರಿಣಾಮಕಾರಿಯನ್ನಾಗಿಸಲು ಬಹುವಿಧ ಕಲಾತ್ಮಕ ಪರಿಕರಗಳನ್ನು ಬಳಸಿಕೊಳ್ಳುತ್ತಾರೆ. ಮುಖವರ್ಣಿಕೆ, ವೇಷಭೂಷಣ, ತಿರುಮುಡಿಗಳು, ಆಯುಧಗಳು, ಕುಣಿತ, ವಾದ್ಯ, ಮಂಡಲ ಇತ್ಯಾದಿ ಕಲಾ ಮಾಧ್ಯಮಗಳು ಭಗವತಿ ಆರಾಧನೆಯನ್ನು ದೃಶ್ಯ ಮತ್ತು ಕಾವ್ಯ ಜನಪದ ರಂಗಭೂಮಿಯನ್ನಾಗಿಸುತ್ತದೆ. ಧಾರ್ಮಿಕತೆಯಲ್ಲಿ ಕಲೆಯ ಪ್ರಸ್ತುತಿಯನ್ನು ಇದು ಬಿಂಬಿಸುತ್ತದೆ. ಪ್ರತಿ ಪರಿಕರಗಳೂ ಪುರುಷ ಮತ್ತು ಸ್ತ್ರೀತ್ವಗಳ ಸಂಯುಕ್ತ ಸ್ವರೂಪದಂತೆ ವ್ಯಕ್ತವಾಗುತ್ತದೆ ಎಂಬುದನ್ನು ಈ ಅಧ್ಯಯನದಲ್ಲಿ ಕೆಲವಾರು ಸಂಕೇತಗಳ ಮೂಲಕ ನಿರ್ಧರಿಸಲಾಗಿದೆ. ಆಂಗಿಕ, ವಾಚಿಕ ಮತ್ತು ಆಹಾರ್ಯದ ದೃಷ್ಟಿಯಿಂದ ಕೇರಳದ ಸಂಸ್ಕೃತಿಯು ಪ್ರಭಾವಶಾಲಿಯಾಗಿ ಭಗವತಿ ಉತ್ಸವಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಆದರಿಂದ ಇದಕ್ಕೊಂದು ತಾಂತ್ರಿಕವಾದ ಸ್ವರೂಪವಿದೆ. ಇದು ಆಧುನಿಕ ವೈಜ್ಞಾನಿಕತೆಗಿಂತ ಭಿನ್ನವಾದದ್ದು. ಸರಳ ಸಂಜ್ಞೆ, ಸಂಕೇತಗಳ ಮೂಲಕ ಶಕ್ತಿಯನ್ನು ಬರಮಾಡಿಕೊಳ್ಳುವ ದೇಸೀ ವಿಜ್ಞಾನವಾಗಿದೆ

ಭಗವತಿ ಆರಾಧನೆಯ ಮೌಖಿಕ ಪಠ್ಯಗಳು ಸಾಂಸ್ಕೃತಿಕ ಸಂರಚನೆಯುಳ್ಳದ್ದುವು. ಅದು ತನ್ನೊಳಗಿನ ಕಥಾ ನಿರೂಪಣೆಯಲ್ಲಿ ಗತಕಾಲದ ಜನಜೀವನವನ್ನು, ಸಾಂಸ್ಕೃತಿಕ ಅಂಶಗಳನ್ನೂ, ಪದ್ಧತಿ–ಪ್ರಭೇದಗಳನ್ನೂ, ಆಚಾರ–ವಿಚಾರಗಳನ್ನೂ, ಏರು–ಇಳಿತಗಳನ್ನೂ ತಿಳಿಹೇಳುತ್ತವೆ. ಪಠ್ಯವೊಂದು ಜನಪದ ಜಗತ್ತಿನಲ್ಲಿ ರೂಪುಗೊಳ್ಳುವಾಗ ಆಯಾ ಕಾಲದ ವಿದ್ಯಮಾನದ ಜೊತೆಗೆ ಸಹಸಂಬಂಧವನ್ನು ಇಟ್ಟುಕೊಂಡಿರುತ್ತದೆ. ಭಗವತಿ ಕಥನವು ಪುರಾಣದಲ್ಲಿ ಪ್ರಾರಂಭವಾಗಿ ಲೌಕಿಕವಾದ ಪ್ರಾದೇಶಿಕ ಪರಿಸರದಲ್ಲಿ ನಿಲುಗಡೆಗೆ ಬರುತ್ತದೆ. ಇದು ಕಲ್ಪನೆಯೊಂದು ವಾಸ್ತವತೆಗೆ ತಲುಪುವ ರೂಪಕ. ತೋಟ್ಟಂ, ಚುದಿಪ್ಪು, ಪಾಟು, ಬಾಕ್‌ಮಾನ ಈ ನಾಲ್ಕು ಮೌಖಿಕ ಸಾಹಿತ್ಯಗಳನ್ನು ಆಕರಗಳನ್ನಾಗಿರಿಸಿ ರಾಚನಿಕತೆ, ಭಾಷಿಕ ಸೊಬಗು, ಕಥಾ ನಿರೂಪಣೆ, ಪ್ರಾಸ, ಅಲಂಕಾರ, ಲೊಕೋಕ್ತಿ ಪ್ರಯೋಗಗಳು ಇವನ್ನೆಲ್ಲ ವಿಶೇಷಾಂಶಗಳೆಂದು ಪರಿಶೋಧಿಸಲಾಗಿದೆ. ಇವಲ್ಲದೆ, ಆರಾಧನೆಯಲ್ಲಿ ಮೌಖಿಕ ಪಠ್ಯಗಳ ಕತೆಯು ಅಭಿವ್ಯಕ್ತಿಗೊಳ್ಳುವ ಬಗೆಯನ್ನು ಕತೆ ಮತ್ತು ಕ್ರಿಯೆಗಳನ್ನು ಮುಖಾಮುಖಿಯನ್ನಾಗಿಸಿ ಸಮರ್ಥಿಸಲಾಗಿದೆ. ಆ ಮುಖೇನ ಆರಾಧನೆ ಎಂಬುದು ಆ ಕುರಿತ ಕತೆಯನ್ನೇ ಸಾಂಸ್ಕೃತಿಕವಾಗಿ ಮರುಸೃಷ್ಟಿಗೊಡ್ಡುವುದು ಎಂಬ ನಿರ್ಣಯಕ್ಕೆ ಬರಲಾಗಿದೆ. ಮೌಖಿಕ ಕಥನಗಳು ಒಂದು ನಿಶ್ಚಿತ ಗತವಲ್ಲ. ಅವು ಕಾಲದಿಂದ ಕಾಲಕ್ಕೆ ಚಲನಶೀಲವಾದದ್ದು. ಸಂಸ್ಕೃತಿ ಪ್ರಸರಣಕ್ಕೆ ಇವು ತಲೆಮಾರುಗಳ ಮಧ್ಯೆ ಕೊಂಡಿಯಾಗಿ ಸಹಕರಿಸುತ್ತದೆ ಎಂಬುದನ್ನು ಇಲ್ಲಿ ಅನುಮೋದಿಸಲಾಗಿದೆ.

ಭಗವತಿ ಆರಾಧನೆಯ ಸಮಗ್ರ ಕಥಾಪಠ್ಯವನ್ನು, ಪಾಠಾಂತರಗಳನ್ನು ಪರಿಗಣಿಸಿಕೊಂಡು ಒಂದೆಡೆ ಕಲೆ ಹಾಕಿರುವುದು ಈ ಅಧ್ಯಯನದ ಮಹತ್ವದ ಫಲಿತ. ಈ ಪಠ್ಯವು ಸಮುದಾಯ, ಪ್ರಕಾರ, ಕೃತಿ, ಸ್ಥಳ, ವ್ಯಕ್ತಿ ಸೀಮಿತವಲ್ಲ. ಗತದಿಂದ ವಾಸ್ತವದ ವರೆಗೂ ನಡೆದಿರುವ ವಿಷಯಾಂತರಗಳನ್ನು ಒಳಗೊಂಡಂತೆ ಈ ಅಧ್ಯಯನದಲ್ಲಿ ಕಥಾಶರೀರವನ್ನು ಮರುವಿವೇಚನೆಗೆ ಒಡ್ಡಲಾಗಿದೆ. ಸಾಂಸ್ಕೃತಿಕವಾದ ಗತದ ನೆನಪು ಮತ್ತು ಕಥನಗಳಿಗೆ ವರ್ತಮಾನದಲ್ಲಿ ಒಂದು ಬಗೆಯ ಅರ್ಥವಂತಿಕೆಯನ್ನು ಇದು ತಂದುಕೊಡುತ್ತದೆ.

ಭಗವತಿ ಆರಾಧನೆಯ ಪರಿಚಯಾತ್ಮಕ, ವಿಶ್ಲೇಷಣಾತ್ಮಕ ವಿವರಗಳನ್ನು ಶೋಧಿಸಿ ಫಲಿತಗಳನ್ನು ಕಂಡುಕೊಂಡ ಬಳಿಕ ಆರಾಧನೆಯ ವಿಚಾರಗಳನ್ನು ಚಿಕಿತ್ಸಾ ಪದ್ಧತಿ ಎನ್ನುವ ನೆಲೆಯಲ್ಲಿ ಮನೋವೈಜ್ಞಾನಿಕವಾಗಿ ವಿಶ್ಲೇಷಿಸಲಾಗಿದೆ. ನ್ಯಾಯ ಪ್ರಮಾಣ ಪದ್ಧತಿಯಾಗಿ ಸಾಮಾಜಿಕ ಬದ್ಧತೆ ಮತ್ತು ನೈತಿಕತೆಯನ್ನು ಸಂರಕ್ಷಿಸುವುದಕ್ಕೆ ಇದು ನೆರವಾಗಿದೆ. ಆಧುನಿಕ ಕಾನೂನು ವ್ಯವಸ್ಥೆಯ ಮಧ್ಯೆಯೂ ಸಾಂಪ್ರದಾಯಿಕ ರೀತಿಯಲ್ಲಿ ಸಮಾಜವನ್ನು ಮೌಲ್ಯಾಭಿಮುಖಿಯನ್ನಾಗಿಸಿದೆ. ಮನೋರಂಜನಾತ್ಮಕ ಅಂಶಗಳನ್ನು ತನ್ನ ಅಭಿವ್ಯಕ್ತಿಯ ಸಂದರ್ಭ ಮತ್ತು ಮಾಧ್ಯಮಗಳಲ್ಲಿ ಜೋಡಿಸಿಕೊಂಡು ಸಾಮಾಜಿಕ ವಿಡಂಬನೆ, ಮೌಲ್ಯ ಪ್ರತಿಪಾದನೆ, ಜನರಂಜನೆ ಮುಂತಾದ ಉದ್ದೇಶಗಳನ್ನು ಈಡೇರಿಸಿಕೊಂಡಿದೆ. ಬೇಟೆ, ಕೃಷಿ, ಕುಲಕಸುಬು ಮುಂತಾದ ಜೀವನೋಪಾಯಗಳನ್ನು ಆರಾಧನೆಯು ಪರೋಕ್ಷವಾಗಿ ಪೋಷಿಸಿಕೊಂಡು ಬಂದಿದೆ.

ಭಗವತಿ ಫಲವಂತಿಕೆಯ ದೇವತೆ. ಆಕೆಯ ಆರಾಧನೆಯ ವಿಧಿವಿಧಾನಗಳೆಲ್ಲವೂ ಒಂದಲ್ಲ ಒಂದು ವಿಧದಲ್ಲಿ ಸಮೃದ್ಧಿಯ ಆಚರಣೆಗಳಾಗಿವೆ. ಜಲತತ್ವದ ಆಧಾರದಲ್ಲಿ, ಸ್ತ್ರೀತ್ವದ ಪ್ರತಿಪಾದನೆಯಲ್ಲಿ ಅಲ್ಲದೆ, ಪ್ರಸವ, ವಿವಾಹ, ಸಂತಾನ, ಉಳುಮೆ, ಲೈಂಗಿಕತೆ ಮೊದಲಾದ ಫಲವಂತಿಕೆಯ ಸಂದರ್ಭಗಳನ್ನು ಭಗವತಿ ಆರಾಧನೆಯ ಪರಿಕರ–ಪರಿಕ್ರಮಗಳಲ್ಲಿ ಗುರುತಿಸಬಹುದು.

ಕುಟುಂಬವು ಆರಾಧನೆಯಲ್ಲೂ, ಆರಾಧನೆಯು ಕುಟುಂಬದಲ್ಲಿಯೂ ಅವಿಭಾಜ್ಯವೆಂಬಂತೆ ಬೆರೆತಿರುವ ಸಂದರ್ಭಗಳಿವೆ. ಹಾಗಾಗಿಯೇ ಭಗವತಿ ಆರಾಧನೆ ಜನಜೀವನದಿಂದ ಹೊರತಾಗಿಲ್ಲ. ಕೌಟುಂಬಿಕ ಏರಿಳಿತಗಳೆಲ್ಲವೂ

ಆರಾಧನಾ ಸ್ಥಳ, ವ್ಯಕ್ತಿ, ಸಂದರ್ಭಗಳಿಂದ ನಿರ್ದೇಶಿಸಲ್ಪಡುತ್ತದೆ. ಕೃಷಿ ಪ್ರಧಾನ ಸಮಾಜದ ಮತ್ತು ವ್ಯಕ್ತಿ, ಶ್ರೇಣೀಕೃತ ಜನಜಾನಪದ ಪೋಷಕ ಶಕ್ತಿಯಾಗಿದೆ.

ಭಗವತಿ ಆರಾಧನೆ ಗತಕಾಲದಿಂದ ಮುಂದುವರಿದುಕೊಂಡು ಬಂದಿದ್ದರೂ, ಸ್ಥಿರರೂಪದಲ್ಲೇ ಇಂದಿಗೂ ಉಳಿದಿದೆ ಎನ್ನುವಂತಿಲ್ಲ. ಕಾಲ ಸಹಜ ಬದಲಾವಣೆಗಳಿಗೆ ಒಳಗಾಗಿದೆ. ಅದು ಭೂತ ಮತ್ತು ವರ್ತಮಾನಗಳ ಚಲನಶೀಲ ಸಂಬಂಧವಾಗಿದೆ. ವ್ಯಕ್ತಿ, ಸ್ಥಳ, ಕಾಲ, ಪರಿಕರ, ವಿಧಾನ, ಭಾಷೆ, ಸೌಲಭ್ಯ, ನಂಬಿಕೆ, ಭಕ್ತಿ, ಭಯ, ತಿಳುವಳಿಕೆ ಈ ಎಲ್ಲಾ ಸ್ತರಗಳಲ್ಲೂ ಆಧುನಿಕತೆ ಮತ್ತು ವೈದಿಕತೆ ಪ್ರಭಾವ ಬೀರಿರುವುದು ಸ್ಪಷ್ಟವಾಗುತ್ತದೆ. ಸಾರ್ವತ್ರಿಕವಾಗಿರುವ ವೈದಿಕ ಆಚರಣೆಗಳ ಬಗ್ಗೆ ಆಕರ್ಷಿತರಾಗಿರುವ ಮತ್ತು ವಿಶ್ವಾಸ ತಳಿದಿರುವ ಆಸ್ಥಿಕ ಜನತೆ ಜನಪದ ಆರಾಧನೆಯಲ್ಲೂ ಅವನ್ನೇ ನಿರೀಕ್ಷಿಸಿದೆ. ಇದಕ್ಕೆ ಕಾರಣಗಳು ಹಲವಾರು ಇಂಗ್ಲಿಷ್ ಶಿಕ್ಷಣ, ಸಾಮಾಜಿಕ ಜಾಲತಾಣಗಳ ಪ್ರಭಾವ, ಜಾಗತೀಕರಣ ಇವೆಲ್ಲವೂ ಆಧುನಿಕ ಪರಿಣಾಮಗಳನ್ನೂ ಭಗವತಿ ಆರಾಧನೆಯ ಮೇಲೆ ಬೀರಿವೆ. ಈ ಎರಡೂ ಬಗೆಗಳ ಪ್ರಭಾವಗಳ ಮಧ್ಯೆ ಭಗವತಿ ಆರಾಧನೆಯಂತಹ ಸಾಂಸ್ಕೃತಿಕ ಪದ್ಧತಿಯೊಂದು ಪಲ್ಲಟವಾಗದೆ ಉಳಿಯಬೇಕಿದ್ದರೆ ವರ್ತಮಾನದಲ್ಲಿ ಅದರ ಪ್ರಸ್ತುತತೆಯನ್ನು ದೃಢ ಪಡಿಸಬೇಕಾಗುತ್ತದೆ. ಸಮರ್ಥನೆಗಾಗಿ ವೈಜ್ಞಾನಿಕ ಆಧಾರಗಳನ್ನು ಉದಾಹರಿಸಬೇಕಾಗುತ್ತದೆ. ಈ ಅಧ್ಯಯನದಲ್ಲಿ ಇಂತಹ ಕೆಲವಾರು ವೈಜ್ಞಾನಿಕ ನೆಲೆಯ ದೃಢೀಕರಣವನ್ನು ನೀಡಲಾಗಿದೆ. ಅಭಿಪ್ರಾಯಗಳ ಸಮರ್ಥನೆಗಾಗಿ ವಿದ್ವಾಂಸರ ಹೇಳಿಕೆಗಳನ್ನು ಉದ್ಧರಿಸಲಾಗಿದೆ. ಪೂರ್ವ ಅಧ್ಯಯನಗಳ ಫಲಿತಗಳನ್ನೂ ಬಳಸಿಕೊಳ್ಳಲಾಗಿದೆ. ಅನುಬಂಧದಲ್ಲಿ ವಿಷಯ ಸ್ಪಷ್ಟತೆಗಾಗಿ ರೇಖಾಚಿತ್ರ, ಭಾವಚಿತ್ರ, ನಕ್ಷೆ, ತಖ್ತೆಗಳನ್ನು ನೀಡಲಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬಳಸಲಾದ ಪ್ರಶ್ನಾವಳಿಗಳ ಪಟ್ಟಿಯನ್ನು ನೀಡಲಾಗಿದೆ. ಮಾಹಿತಿ ನೀಡಿದ ಸಂಶೋಧನಾ ಸಹಭಾಗಿಗಳು, ಪೂರಕ ಮಾಹಿದಾರರ ವಿವರಗಳನ್ನು ಕೊಡಲಾಗಿದೆ.

ಅಧ್ಯಯನದ ಮುಂದಿನ ಸಾಧ್ಯತೆಗಳು

ಆರಾಧನೆ ಎಂಬುದು ಜನಜೀವನದ ಮುಖ್ಯ ಭಾಗ. ಅದು ಜೀವನದ ನಡವಳಿಕೆ ಮತ್ತು ವಿವಿಧ ಜ್ಞಾನ ಶಿಸ್ತುಗಳೊಂದಿಗೆ ಸಂಬಂಧವಿಟ್ಟುಕೊಂಡಿದೆ. ಆರಾಧನೆಯ ವಿಚಾರವನ್ನು ಬಗೆದಂತೆ ಅದು ಸಂಕೀರ್ಣಗೊಳ್ಳುತ್ತಾ ಹೋಗುತ್ತದೆ. ಪ್ರತಿಯೊಂದರ ಜೊತೆಗೂ ಬೆಸೆದುಕೊಂಡಿರುವ ಸಂಬಂಧ ಗೋಚರವಾಗುತ್ತದೆ. ಇದರಿಂದಾಗಿಯೇ ಇಂತಹ ವಿಷಯದಲ್ಲಿ ಸಂಶೋಧನೆ ಕೈಗೊಳ್ಳುವ ಸಂಶೋಧಕನಿಗೆ ತೊಡಕುಗಳು ಹೆಚ್ಚು. ಭಗವತಿ ಆರಾಧನೆಯು ಒಂದು ಸ್ಥಾನದಲ್ಲಿರುವಂತೆ ಇನ್ನೊಂದು ಕಡೆ ಇಲ್ಲ. ಹಾಗಾಗಿ ನಿಶ್ಚಿತ ಅಭಿಪ್ರಾಯಕ್ಕೆ ಬರುವುದು ಕಷ್ಟವಾಗುತ್ತದೆ. ಎಲ್ಲಾ ಅಭಿಪ್ರಾಯಗಳನ್ನು ಈ ಅಧ್ಯಯನವು ಸ್ವೀಕರಿಸಿದ್ದು, ಅವುಗಳ ಆಧಾರದಲ್ಲಿ ನಿರ್ದಿಷ್ಟ ಫಲಿತವನ್ನು ನೀಡುವ ಪ್ರಯತ್ನ ಮಾಡಿದೆ.

ಈ ಅಧ್ಯಯನದ ವಿಷಯವಾಗಿರುವ ಭಗವತಿ ಆರಾಧನೆಯು ಬಹುವಿಸ್ತಾರ ವ್ಯಾಪ್ತಿಯುಳ್ಳದ್ದು. ಇಲ್ಲಿ ಉತ್ತರ ಕೇರಳ ಮತ್ತು ದಕ್ಷಿಣ ತುಳುನಾಡಿನ ವ್ಯಾಪ್ತಿಯ ಆರಾಧನೆಯನ್ನು ಮಾತ್ರಾ ಪರಿಗಣಿಸಿ ಸಂಶೋಧನೆ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಇದಲ್ಲದೆ ಮಧ್ಯ ಮತ್ತು ದಕ್ಷಿಣ ಕೇರಳದಲ್ಲಿ ನಡೆಯುವ ತೆಯ್ಯಂ, ತಿರಂ, ವೈದಿಕರೂಪಗಳ ಭಗವತಿ ಆರಾಧನೆಯನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಬಹುದು. ಪಡೆಯಣಿ, ಮುಡಿಯೇಟ್ಟ್, ತೆಯ್ಯಂ, ಕಳಿಯಾಟ, ಪಾನಂ, ಕಳಂಪಾಟ್ ಮುಂತಾದ ಆರಾಧನಾ ಪ್ರಭೇದಗಳೂ ಕೂಡಾ ಒಂದೊಂದಾಗಿ ಅಧ್ಯಯನ ನಡೆಸುವಷ್ಟು ವಿಚಾರಪೂರ್ಣವಾಗಿವೆ. ಸಮುದ್ರ ಜಾನಪದ, ಪರಿಸರಜಾನಪದ, ವೈದಿಕ ಗ್ರಂಥಗಳಲ್ಲಿ ಭಗವತಿ, ಮಂತ್ರವಾದದಲ್ಲಿ

ಭಗವತಿ, ಕಲಾ ಪ್ರಕಾರಗಳಲ್ಲಿ ಭಗವತಿ, ತುಳುನಾಡಿನಲ್ಲಿ ಭಗವತಿ, ಸ್ತ್ರೀವಾದದ ಹಿನ್ನೆಲೆಯಲ್ಲಿ ಭಗವತಿ ಸೃಜನಶೀಲ ಕೃತಿಗಳಲ್ಲಿ ಭಗವತಿ ಮುಂತಾದ ವಿಷಯಗಳೂ ಅಧ್ಯಯನ ಯೋಗ್ಯವಾದವುಗಳು.

ಸರಿಸುಮಾರು ೪೦೦ಕ್ಕಿಂತಲೂ ಅಧಿಕ ಭಗವತಿಯರ ಹೆಸರುಗಳನ್ನು ಈ ಅಧ್ಯಯನದ ಅನುಬಂಧ ೧ರಲ್ಲಿ ನೀಡಲಾಗಿದ್ದು, ಒಂದೊಂದು ಭಗವತಿಯೂ ಸಂಶೋಧನೆಗೆ ವಿಷಯವಾಗುವವಳು. ಆರಾಧನಾ ಹಿನ್ನೆಲೆ ಮತ್ತು ವಿಧಾನಗಳಲ್ಲಿ ವೈವಿಧ್ಯತೆ ವಿಶೇಷತೆಗಳಿವೆ. ಸಮುದಾಯ ಕೇಂದ್ರಿತವಾಗಿಯೂ ಭಗವತಿ ಆರಾಧನೆಯನ್ನು ಸಮಾಜೋ ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡಬಹುದು.

ಒಟ್ಟಿನಲ್ಲಿ ಭಗವತಿ ಆರಾಧನೆಯ ಕುರಿತು ನಡೆಸಿದ ಈ ಬಹುಮುಖೀ ಸಾಂಸ್ಕೃತಿಕ ಅಧ್ಯಯನವು ಕೇರಳ ಮೂಲದ ಮಲೆಯಾಳ ಆರಾಧನಾ ಪ್ರಕಾರದೊಂದಿಗೆ ಇಟ್ಟುಕೊಂಡಿರುವ ನಿರಂತರ ಒಡನಾಟದಿಂದ ಕನ್ನಡ ಜಗತ್ತಿನಲ್ಲಿ ಹೊಸ ಪರ್ಯಾಯ ಸಾಂಸ್ಕೃತಿಕ ಚರಿತ್ರೆಯೊಂದನ್ನು ಕಟ್ಟುವ ದಿಕ್ಕಿನೆಡೆಗೆ ಸಾಗಲು ಪ್ರಯತ್ನಿಸಿದೆ. ನೆರೆ ಸಂಸ್ಕೃತಿಯೊಂದಿಗೆ ಕನ್ನಡ ಸಂಸ್ಕೃತಿಯು ಮುಖಾಮುಖಿಗೊಂಡು ಆ ಮೂಲಕ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯ ವಿಶ್ಲೇಷಣೆ ನಡೆಸಲು ಅವಕಾಶವೊಂದನ್ನು ಸೃಷ್ಟಿಸಿದೆ.

ಅನುಬಂಧ

ಅಧ್ಯಯನದ ಕೊನೆಯಲ್ಲಿ ಅನುಬಂಧವನ್ನು ನೀಡಲಾಗಿದ್ದು ಇದರಲ್ಲಿ ೪೦೩ ಭಗವತಿಯರ ಪರಿಷ್ಕೃತ ಪಟ್ಟಿಯನ್ನು ನೀಡಲಾಗಿದೆ. ಕನ್ನಡ ಸಂಶೋಧನಾ ವಲಯದಲ್ಲಿ ಇದೊಂದು ಪ್ರಥಮ ಪ್ರಯತ್ನ ಎನ್ನಬಹುದು. ಇದಲ್ಲದೆ, ತೆಯ್ಯಂ ಅಲಂಕರಣಗಳ ಪಟ್ಟಿಯನ್ನೂ ಭಗವತಿ ಆರಾಧನೆಯ ಕೆಲವಾರು ಮೂಲ ಮೌಖಿಕ ಪಠ್ಯಗಳನ್ನೂ ನೀಡಲಾಗಿದೆ. ಭಗವತಿ ಆರಾಧನಾ ರಂಗದ ಸಂವಹನದ ಭಾಷೆ ಮಲೆಯಾಳಂ ಆಗಿರುವ ಕಾರಣ ಪರಿಭಾಷೆಗಳನ್ನು ಅರ್ಥೈಸಲು ಅನುಕೂಲವಾಗುವಂತೆ ಸಾಂಸ್ಕೃತಿಕ ಪದಕೋಶವನ್ನು ನೀಡಲಾಗಿದೆ. ಅಧ್ಯಯನಕ್ಕೆ ಆಕರಗಳನ್ನಿತ್ತ ವಕ್ತೃಗಳ ಹೆಸರು–ವಿಳಾಸ, ಮಾಹಿತಿದಾರದ ಕೋಷ್ಟಕ, ಅಧ್ಯಯನದ ವಿಶ್ಲೇಷಣೆ ಮತ್ತು ಫಲಿತಗಳ ಸಮರ್ಥನೆಗೆ ಬಳಸಿಕೊಂಡ ಪರಾಮರ್ಶನ ಗ್ರಂಥಗಳ ವಿವರಗಳನ್ನು ಜೊತೆಗಿರಿಸಲಾಗಿದೆ.

ಅಧ್ಯಯನದುದ್ದಕ್ಕೂ ಅವಶ್ಯವಿರುವಲ್ಲಿ ವಿಷಯ ಸ್ಪಷ್ಟತೆಗಾಗಿ ವಿವಿಧ ಛಾಯಾಚಿತ್ರ–ರೇಖಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ.

ಈ ಅಧ್ಯಯನದ ಸಂದರ್ಭದಲ್ಲಿ ಕಲೆಹಾಕಲಾದ ಮಾಹಿತಿಗಳಲ್ಲಿ ಕೆಲವನ್ನು ಆಯ್ದು ಅವುಗಳ ಕುರಿತು ಸಂಶೋಧನಾ ಪ್ರಬಂಧಗಳನ್ನು ಬರೆದು ವಿವಿಧ ವಿಚಾರ ಸಂಕಿರಣಗಳಲ್ಲಿ ಮಂಡಿಸಲಾಯಿತು. ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು.

ಅಧ್ಯಯನದ ಪ್ರತಿ ಹಂತದ ಬೆಳವಣಿಗೆಯ ವಿವರಗಳನ್ನು ಅರ್ಧವಾರ್ಷಿಕ ವರದಿಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ನೀಡಲಾಗಿದೆ.

ಒಟ್ಟಿನಲ್ಲಿ ಸಂಶೋಧನಾ ಕ್ಷೇತ್ರದಲ್ಲಿ ಈ ವರೆಗೂ ದಾಖಲಿಸದ ಮತ್ತು ವಿಶ್ಲೇಷಿಸದ ಹಲವು ಹೊಸ ವಿಚಾರಗಳನ್ನು ಮತ್ತು ಫಲಿತಗಳನ್ನು ಪ್ರಸ್ತುತ ಅಧ್ಯಯನವು ಒಳಗೊಳ್ಳುವುದರಿಂದ ಇದೊಂದು ಮಹತ್ವದ ಸಂಶೋಧನೆಯಾಗಿದೆ.